₹ 4 | ಪುಟ: 4 | ಸಂಪುಟ: 4 | ಸಂಚಿಕೆ 71 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 | Issue: 71 | Monday, 01, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

## ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ, ಆಶಾಗಳಿಗೆ 8 ಸಾವಿರ ರೂ. ವೇತನ ಹೆಚ್ಚಳ

### ಪ್ರಿಯಾಂಕಾ ಗಾಂಧಿ ಹೊಸ ಗ್ಯಾರಂಟಿ ಘೋಷಣೆ

ಖಾನಾಪುರ: ಅಂಗನವಾಡಿ ಕಾರ್ಯಕರ್ತೆಯರಿಗೆ 15 ಸಾವಿರ ರೂ., ಆಶಾ ಕಾರ್ಯಕರ್ತೆಯರಿಗಾಗಿ 8 ಸಾವಿರ ರೂ. ವೇತನ ಹೆಚ್ಚಳ ಮಾಡಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಹೊಸ ಯೋಜನೆ ಘೋಷಣೆ ಮಾಡಿದರು.

ಖಾನಾಪುರ ಪಟ್ಟಣದ ಮಲಪ್ರಭ ಕ್ರೀಡಾಂಗಣದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಮ್ಮಿಕೊಂಡಿದ್ದ ಖಾನಾಪುರ ವಿಧಾನಸಭಾ ಮತಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಕಾಂಗ್ರೆಸ್ ಗ್ಯಾರಂಟಿಯಲ್ಲಿ ಮತ್ತೊಂದು ಗ್ಯಾರಂಟಿ ಘೋಷಣೆ ಮಾಡಲಾಗಿದೆ. ಅಂಗನವಾಡಿ, ಆಶಾ ಕಾರ್ಯಕರ್ತ-ರಿಗೆ ವೇತನ ಹೆಚ್ಚಳ ಮಾಡಲಾಗುತ್ತದೆ. ಬಿಸಿಯೂಟ ಕಾರ್ಯಕರ್ತರಿಗೆ 5 ಸಾವಿರ ರೂ. ವೇತನ ಏರಿಕೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಬಿಜೆಪಿ ವಿರುದ್ಧ ಪ್ರಿಯಾಂಕಾ ಗಾಂಧಿ ವಾಗ್ದಾಳಿ: ಕರ್ನಾಟಕದಲ್ಲಿ ಸಂಸ್ಕೃತಿ, ಸಂಸ್ಕಾರವು ಎಲ್ಲವೂ ಇದೆ. ಪ್ರಕೃತಿಯ ಎಲ್ಲಾ ವಂಶಗಳು ರಾಜ್ಯದಲ್ಲಿ ಇವೆ. ಇಲ್ಲಿನ




ಸರ್ಕಾರ ರಾಜ್ಯದ ಮಹತ್ವ ತಿಳಿದಿಲ್ಲ. ಜನರಿಗಾಗಿ ಕೆಲಸ ಮಾಡುವ ಸರ್ಕಾರ ಇರಬೇಕು. ಅಧಿಕಾರಕ್ಕೆ ಸಿಗುತ್ತಲೇ ನಮಗೆ ಗಳಿಸುತ್ತೇವೆ ಎನ್ನುವ ಭಾವನೆ ಕೆಲವರಿಗೆ ಬರುತ್ತದೆ.

ಇಂತಹ ಭಾವನೆ ಇರೋ ಸರ್ಕಾರ ಕಳೆದ ಮೂರು ವರ್ಷ ಹಿಂದೆ ರಚನೆ ಆಗಿದೆ. ಶಾಸಕರನ್ನು ಖರೀದಿಸಿ ಬಿಜೆಪಿ ಸರ್ಕಾರ ರಚಿಸಿದೆ ಎಂದರು.

ಮುಖ್ಯಮಂತ್ರಿ ಬದಲಾವಣೆಯಿಂದ ಅಭಿವೃದ್ಧಿ ಕೆಲಸ ಕುಂಠಿತವಾಗಿದೆ. ಪರ್ಸಂಟೇಜ್ ಸರ್ಕಾರ ಎಂದೇ ಇದು ಗುರುತಿಸಿಕೊಂಡಿದೆ. ಬೆಲೆ ಏರಿಕೆಯಿಂದ ಜನ ಸಾಮಾನ್ಯರಿಗೆ ಸಂಕಷ್ಟ ಎದುರಾಗಿದೆ. ಬೆಲೆ ಏರಿಕೆಯಿಂದ ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ರೈತರ ಎಲ್ಲಾ ವಸ್ತುಗಳ ಮೇಲೆ ಜಿಎಸ್ಟಿ, ಟ್ಯಾಕ್ಸ್ ಪರಿಣಾಮ ಬಿದ್ದಿದೆ. ಎಲ್ಲಾ ಹಂತದಲ್ಲಿ ರೈತರು, ಮಹಿಳೆಯರಿಗೆ ಮೋಸ ಆಗಿದೆ. 2.5 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಇದನ್ನು ತುಂಬಿಕೊಳ್ಳುವ ಕೆಲಸ ಸರ್ಕಾರ ಮಾಡಿಲ್ಲ. ನೋಟ್ ಬ್ಯಾನ್, ಜಿಎಸ್ಟಿಯಿಂದ ಸಾಕಷ್ಟು ಸಮಸ್ಯೆ ಆಗಿದೆ. ಪಿಎಸ್ಐ ನೇಮಕಾತಿಯಲ್ಲಿ ಅವ್ಯವಹಾರ ಆಗಿದೆ. ಶಾಸಕನ ಪುತ್ರರ ಬಳಿ 8 ಕೋಟಿ ಸಿಕ್ಕರೂ ಯಾವುದೇ ಶಿಕ್ಷೆ ಆಗಿಲ್ಲ. ಗುತ್ತಿಗೆದಾರ ಸಂಘದಿಂದ ಭ್ರಷ್ಟಾಚಾರದ ಬಗ್ಗೆ ಪತ್ರ ಬರೆದರೆ ಯಾವುದೇ ಕ್ರಮ ಆಗಿಲ್ಲ. ಐದು ವರ್ಷ ಇದೇ ಸರ್ಕಾರ ಇರಬೇಕೋ ಬದಲಾವಣೆ ಮಾಡಬೇಕು ಎಂದು ನೀವು ನಿರ್ಧಾರ ಮಾಡಬೇಕು ಎಂದು ಹೇಳಿದರು.

ಲೂಟ್, ಜೂಟ್ ಸರ್ಕಾರ ರಾಜ್ಯದಲ್ಲಿ ಇದೆ. ರಾಜ್ಯದಲ್ಲಿ ಮೀಸಲಾತಿ ಹೆಚ್ಚಳ ಮಾತು ಆಡುತ್ತಾರೆ. ಕೇಂದ್ರದಲ್ಲಿ ಮೀಸಲಾತಿ ಏರಿಕೆ ಸಾಧ್ಯವಿಲ್ಲ ಎನ್ನುತ್ತಾರೆ. ನ್ಯಾ.ನಾಗಮೋಹನ ದಾಸ್ ವರದಿಯನ್ನು ಚುನಾವಣೆ ಸಂದರ್ಭದಲ್ಲಿ ಮೀಸಲಾತಿ ಏರಿಕೆ ಮಾಡಿದೆ.

ಚುನಾವಣೆ ಸಂದರ್ಭದಲ್ಲಿ ಮಾತ್ರ ಬಂದು ದೊಡ್ಡ ದೊಡ್ಡ ಭರವಸೆ ನೀಡುತ್ತಾರೆ. ಭರವಸೆ ಈಡೇರಿಸುವ ಯಾವುದೇ ಉದ್ದೇಶ ಬಿಜೆಪಿ ಈಡೇರಿಲ್ಲ ಎಮದು ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಮಾತನಾಡಿ, ಕಳೆದ ಐದು ವರ್ಷಗಳಲ್ಲಿ ನಿಮ್ಮ ಮತಕ್ಷೇತ್ರದ ಶಾಸಕಿಯಾದ ಅಂಜಲಿ ನಿಂಬಾಳಕರ್ ಅವರು ಬಹಳ ಪ್ರಾಮಾಣಿಕತೆಯಿಂದ ನಿಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಕಾರಣ ಅವರನ್ನು ಮತ್ತೊಮ್ಮೆ ಶಾಸಕರಾಗಲು ಆಶೀರ್ವದಿಸಬೇಕೆಂದು ಕರೆ ನೀಡಿದರು.

ಶಾಸಕಿ ಅಂಜಲಿ ನಿಂಬಾಳಕರ್ ಮಾತನಾಡಿ, ನಾನು ಶಾಸಕಿಯಾದ ಮೇಲೆ ಖಾನಾಪುರದಲ್ಲಿ 100 ಬೇಡ್ ಗಳ ನೂತನ ಸರ್ಕಾರಿ ಆಸ್ಪತ್ರೆ, ನೂನತ ಬಸ್ ನಿಲ್ದಾಣ ಸೇರಿದಂತೆ ನೀರಾವರಿ ಕೆಲಸಗಳು ಮಾಡಿದ್ದೇನೆ.

ಖಾನಾಪುರ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಲು ಕಾಂಗ್ರೆಸ್ ಗೆ ಮತ ನೀಡಬೇಕು. ಈಗಾಗಲೇ ಕಾಂಗ್ರೆಸ್ ಪಕ್ಷ ಘೋಷಿಸಿದ್ದ ಐದು ಗ್ಯಾರೇಂಟಿಗಳಿಂದ ಜನ ಖುಷಿ ಆಗಿದ್ದಾರೆ. ನಿಮ್ಮ ಕಾಳಜಿ, ಸಮಸ್ಯೆಗೆ ಸ್ಪಂದಿಸಲು ಕಾಂಗ್ರೆಸ್ ಪಕ್ಷ ಹಾಗೂ ನಾನು ಕೂಡ ಸದಾ ಬದ್ಧನಾಗಿರುತ್ತೇನೆ. ಹೀಗಾಗಿ ನನ್ನನ್ನು ಮತ್ತೊಮ್ಮೆ ಆಶೀರ್ವದಿಸಬೇಕೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಐಸಿಸಿ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ್, ಎಐಸಿಸಿ ವೀಕ್ಷಕ ವಿಶ್ವನಾದನ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕದ ಪದಾಧಿಕಾರಿಗಳು, ಕಾರ್ಯಕರ್ಯರು, ಅಪಾರ ಸಂಖ್ಯೆಯ ಜನರು ಪಾಲ್ಗೊಂಡಿದ್ದರು.

## ಎಂಇಎಸ್ ಪರ ಬೆಳಗಾವಿಯಲ್ಲಿ ಶಿಂಧೆ-ಫಡ್ನವೀಸ್ ಪ್ರಚಾರ ಮಾಡಲಿ: ರಾವುತ್ ಸವಾಲು



ಮುಂಬಯಿ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಮತ್ತು ಉಪಮುಖ್ಯಮಂತ್ರಿ ಫಡ್ನವೀಸ್ ಅವರು ಬೆಳಗಾವಿಗೆ ತೆರಳಿ ಎಂಇ-ಎಸ್ ಪರ ಪ್ರಚಾರ ಮಾಡಬೇಕು ಎಂದು ಮಾಜಿ ಸಚಿವ ಸಂಜಯ್ ರಾವುತ್ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾವುತ್ "ನಾನು ಮಹಾರಾಷ್ಟ್ರ ಏಕೀಕರಣ ಸಮಿತಿ ಪರ ಮತ ಕೇಳಲು ಕರ್ನಾಟಕದ ಮರಾಠಿ ಮಾತನಾಡುವ ಪ್ರದೇಶಗಳಿಗೆ ಹೋಗುತ್ತಿದ್ದೇನೆ.

ಉಪಮುಖ್ಯಮಂತ್ರಿ ಫಡ್ನವೀಸ್ ಬೆಳಗಾವಿಗೆ ತೆರಳಿ ಎಂಇಎಸ್ ಪರ ಪ್ರಚಾರ ಮಾಡಬೇಕು. ಆದರೆ, ಪರಿಸ್ಥಿತಿ ವಿಭಿನ್ನವಾಗಿದೆ, ಎಂಇಎಸ್ ಸೋಲಿಸಲು ಅವರು ಬೆಳಗಾವಿಗೆ ಹೋಗಿದ್ದಾರೆ.

ಬಿಜೆಪಿ ಮರಾಠಿ ಜನರನ್ನು ಸೋಲಿಸಲು ಹೋಗಿದ್ದಕ್ಕಾಗಿ ನಾಚಿಕೆಪಡಬೇಕು ಎಂದು ರಾವುತ್ ಹೇಳಿದ್ದಾರೆ.

ಮಹಾರಾಷ್ಟ್ರ-ಕರ್ನಾಟಕ ಗಡಿ ಆಂದೋಲನದಲ್ಲಿ ತಾನು ಭಾಗವಹಿಸಿದ್ದೇನೆ ಎಂದು ಸಿಎಂ ಶಿಂಧೆ ಹೇಳಿಕೊಳ್ಳುತ್ತಾರೆ, ಅವರು ನಿಜವಾಗಿಯೂ ಹಾಗೆ ಮಾಡಿದ್ದರೆ ಅವರು ಎಂಇಎಸ್ ಮತ್ತು ಬಿಜೆಪಿ ವಿರುದ್ಧ ಪ್ರಚಾರ ಮಾಡಲು ಬೆಳಗಾವಿಯಲ್ಲಿರಬೇಕು ಎಂದರು.

ಕಳೆದ ವರ್ಷ ಜೂನ್‌ನಿಂದ ಮಹಾರಾಷ್ಟ್ರದಲ್ಲಿ ಬಿಜೆಪಿ ಮತ್ತು ಶಿಂಧೆ ಅವರ ಶಿವಸೇನೆ ಆಡಳಿತ ಮಿತ್ರಪಕ್ಷಗಳಾಗಿವೆ. ಬೆಳಗಾವಿ-ಕಾರವಾರದ ಮರಾಠಿ ಮಾತನಾಡುವ ಜನರಿಗೆ ಶಿವಸೇನೆ (ಯುಬಿಟಿ) ಬದ್ಧವಾಗಿದೆ. ಶಿವಸೇನೆಯ 69 ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. ಪಕ್ಷದ ಸಂಸ್ಥಾಪಕ ಬಾಳ್ ಠಾಕ್ರೆ ಅವರನ್ನು ಗಡಿ ವಿವಾದದಲ್ಲಿ ಮೂರು ತಿಂಗಳ ಕಾಲ ಜೈಲಿನಲ್ಲಿರಿಸಲಾಗಿತ್ತು ಎಂದು ರಾಜ್ಯಸಭಾ ಸಂಸದ ರಾವುತ್ ಕಿಡಿ ಕಾರಿದ್ದಾರೆ.

## ಇಂದು ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರೆ ಪರವಾಗಿ ರೋಡ್ ಶೋ ನಡೆಸಲಿರುವ ನಟ ಕಿಚ್ಚ ಸುದೀಪ್



ಬೆಳಗಾವಿ : 2023 ರ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪರ ಪ್ರಚಾರ ನಡೆಸುತ್ತಿರುವ ಸ್ಟಾರ್ ಅಭಿನಯ ಚಕ್ರವರ್ತಿ ನಟ ಕಿಚ್ಚ ಸುದೀಪ ಇಂದು ಯಮಕನಮರಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರಿ ಪರ ಮತಯಾಚನೆ ಮಾಡಲಿದ್ದಾರೆ.

(ಸೋಮವಾರ). ಇಂದು ಸಾಯಂಕಾಲ 4 ಗಂಟೆಗೆ ಹೊಸ ವಂಟಮೂರಿ ಗ್ರಾಮದಲ್ಲಿ ರೋಡ್ ಶೋ ಮುಖಾಂತರ ಪ್ರಚಾರ ಆರಂಭವಾಗಲಿದ್ದು, ಅದೇ ರೀತಿ ಬೆಳಗಾವಿ ಜಿಲ್ಲೆಯ ಕೆಲ ಮತಕ್ಷೇತ್ರಗಳಲ್ಲಿ ರೋಡ್ ಶೋ ನಡೆಸಲಿದ್ದಾರೆಂದು ತಿಳಿಯಲಾಗಿದೆ ಹಾಗೂ ಯಮಕನಮರಡಿ ಕ್ಷೇತ್ರದಲ್ಲಿ ಅಲ್ಲಿಂದ ಪಾಶ್ಚಾಪೂರ ಗ್ರಾಮದ ವರೆಗೆ ರ್ಯಾಲಿ ಮುಖಾಂತರ ಮತಯಾಚನೆ ನಡೆಯಲಿದೆ.

ಅಭಿಮಾನಿ ಹಾಗೂ ಅಭ್ಯರ್ಥಿ ಪರ ಮತಯಾಚನೆ ಮಾಡಲಿರುವ ಕಿಚ್ಚ..!: ಬಿಜೆಪಿ ಅಭ್ಯರ್ಥಿ ಬಸವರಾಜ ಹುಂದ್ರಿ ಕಿಚ್ಚ ಸುದೀಪ ಅವರ ಕಟ್ಟಾ ಅಭಿಮಾನಿಯಾಗಿದ್ದಾರೆ.

ಈಗ ಅವರು ಮೊದಲ ಬಾರಿಗೆ ರಾಜಕೀಯ ಚುನಾವಣೆ ಎದು-ರಿಸುತ್ತಿದ್ದು, ಇದೆ ಸಂದರ್ಭದಲ್ಲಿ ಕಿಚ್ಚ ಇವರ ಪರ ಪ್ರಚಾರಕ್ಕೆ ಬರುತ್ತಿರುವುದರಿಂದ ಅಭ್ಯರ್ಥಿ ಬಸವರಾಜು ಅಂದ್ರೆ ಅವರಿಗೆ ಖುಷಿಯ ವಿಷಯವಾಗಿದೆ

ಕಿಕ್ಕಿರಿದು ಸೇರಲಿರುವ ಕಾರ್ಯಕರ್ತರು ಹಾಗೂ ಅಭಿಮಾನಿಗಳು..!: ಇಂದು ನಡೆಯಲಿರುವ ಕಿಚ್ಚ ಸುದೀಪ ಪ್ರಚಾರಕ್ಕೆ ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಕಿಕ್ಕಿರಿದು ಸೇರಲಿದ್ದು ಅದು ಹುಂದ್ರಿಗೆ ಮತದಾನ ರೂಪದಲ್ಲಿ ವರದಾನವಾಗಲಿದೆ ಎಂದು ತಿಳಿಯಲಾಗಿದೆ.

## ಕರ್ನಾಟಕವನ್ನು ನಂ.1 ರಾಜ್ಯವನ್ನಾಗಿ ಮಾಡುವುದು ನಮ್ಮ ಉದ್ದೇಶ

### ಕಾಂಗ್ರೆಸ್‌ನಂತಹ ಗುಜರಿ ಇಂಜಿನನಿಂದ ಅದು ಸಾಧ್ಯವಿಲ್ಲ: ಕೋಲಾರದಲ್ಲಿ ಪ್ರಧಾನಿ ಮೋದಿ ಭಾಷಣ

ಬೆಂಗಳೂರು: ಕರ್ನಾಟಕವನ್ನು ನಂ.1 ರಾಜ್ಯವನ್ನಾಗಿ ಮಾಡುವುದು ನಮ್ಮ ಉದ್ದೇಶವಾಗಿದ್ದು, ಕಾಂಗ್ರೆಸ್-ಜೆಡಿ-ಎಸ್'ನಿಂದ ಅದು ಸಾಧ್ಯವಿಲ್ಲ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾನುವಾರ ಹೇಳಿದ್ದಾರೆ.

ಚಿನ್ನದ ನಾಡು ಕೋಲಾರಕ್ಕೆ ಭೇಟಿ ನೀಡಿರುವ ಅವರು, ಬಿಜೆಪಿ ಸಮಾವೇಶದಲ್ಲಿ ರಾಜ್ಯದ ಜನತೆಯನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದಾರೆ.

ಚಿನ್ನದ ನಾಡು ಕೋಲಾರದಲ್ಲಿ ಜನರು ಸೇರಿರುವುದು ಕಾಂಗ್ರೆಸ್ ಮತ್ತು ಜೆಡಿ-ಎಸ್ ನಿದ್ದೆಗೆಡಿಸುತ್ತದೆ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಈ ಎರಡೂ ಪಕ್ಷಗಳು ದೊಡ್ಡ ಅಡ್ಡಿಯುಂಟು ಮಾಡುತ್ತಿದ್ದು, ಸಾರ್ವಜನಿಕರು ಈ ಪಕ್ಷಗಳನ್ನು ಕ್ಲೀನ್ ಬೌಲ್ಡ್ ಮಾಡುತ್ತಾರೆ. ಕಾಂಗ್ರೆಸ್ ಮತ್ತು ಜೆಡಿಎಸ್ ನ ಭ್ರಷ್ಟ ಸರಕಾರದಿಂದ ಕರ್ನಾಟಕದ ಜನತೆಯನ್ನು ರಕ್ಷಿಸಬೇಕು. ಈ ಬಾರಿಯ ನಿರ್ಧಾರ ಬಹುಮತದ ಬಿಜೆಪಿ ಸರ್ಕಾರ ಎಂದು ಹೇಳಿದರು.

ಈ ಚುನಾವಣೆ ಬಾರಿಯ ಚುನಾವಣೆ ಬರೀ ಶಾಸಕರ ಆಯ್ಕೆ, ಮುಖ್ಯಮಂತ್ರಿ ಮಾಡಲು ಚುನಾವಣೆಯಷ್ಟೇ ಅಲ್ಲ. ಮುಂದಿನ 25 ವರ್ಷಗಳ ಕಾಲ ಕರ್ನಾಟಕವನ್ನು ಅಭಿವೃದ್ಧಿ ರಾಜ್ಯ ಮಾಡುವುದಾಗಿದೆ. ಅಸ್ಥಿರ ಸರ್ಕಾರವಿದ್ದರೇ ಲಾಭಕ್ಕಿಂತ ನಷ್ಟವೇ ಜಾಸ್ತಿ. ಅಸ್ತಿರ ಸರ್ಕಾರದಿಂದ ಭ್ರಷ್ಟಾಚಾರ ಹೆಚ್ಚಾಗುತ್ತದೆ. ಹೀಗಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳನ್ನು ಅಧಿಕಾರದಿಂದ ದೂರವಿಡೋಣ ಎಂದು ತಿಳಿಸಿದರು.



ದಶಕದಿಂದ ನೆನೆಗುದಿಗೆ ಬಿದ್ದಿದ್ದ ಎಲ್ಲ ಕೆಲಸ ಬಿಜೆಪಿ ಮಾಡಿದೆ. ಬಿಜೆಪಿಗೆ ನೀಡುವ ನಿಮ್ಮ ಒಂದು ಮತದಿಂದ ಸಾಕಷ್ಟು ಬದಲಾವಣೆಗಳಾಗುತ್ತವೆ. ಬಹುಮತದ ಒಂದು ಸರ್ಕಾರ ಅಧಿಕಾರಕ್ಕೆ ಬಂದರೇ ಸಾಕಷ್ಟು ಬದಲಾವಣೆಯಾಗುತ್ತದೆ. ನಮ್ಮ ಆರ್ಥಿಕತೆಗೆ ಸಾಕಷ್ಟು ಉತ್ತೇಜನ ಸಿಕ್ಕಿದೆ. ಕೊರೋನಾ ಕಾಲದಲ್ಲಿ ನಾವು ಮಾಡಿದ ಕಾರ್ಯ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ನಮ್ಮ ವ್ಯಾಕ್ಸಿನೇಷನ್ ಮೂಲಕ ಭಾರತದ ಸಾಮರ್ಥ್ಯ ಜಗತ್ತಿಗೆ ಗೊತ್ತಾಗಿದೆ ಎಂದರು.

ಕರ್ನಾಟಕವನ್ನು ನಂ.1 ರಾಜ್ಯವಾಗಿ ಮಾಡುವುದು ನಮ್ಮ ಉದ್ದೇಶವಾಗಿದೆ. ಡಬಲ್ ಇಂಜಿನ್ ಸರ್ಕಾರವಿದ್ದರೇ ಸಾಕಷ್ಟು ಅಭಿವೃದ್ಧಿಯಾಗುತ್ತದೆ. ಕೇಂದ್ರದಲ್ಲಿರುವ ಪ್ರಬಲವಾದ ಬಿಜೆಪಿ ಇಂಜಿನ್ ತರಹ ಕರ್ನಾಟಕದಲ್ಲೂ ಗಟ್ಟಿಯಾದ ಇಂಜಿನ್ ಅಧಿಕಾರಕ್ಕೆ ಬರಬೇಕು.

ಕಾಂಗ್ರೆಸ್ನಂತಹ ಗುಜರಿ ಇಂಜಿನ್ನಿಂದ ಅಭಿವೃದ್ಧಿಯಾಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಡಬಲ್ ಇಂಜಿನ್ ಸರ್ಕಾರದ ಮೂಲಕ ಕೋಲಾರಕ್ಕೆ ಅನೇಕ ಕೈಗಾ-ರಿಕೆಗಳು ಬರುತ್ತಿವೆ. ಮುಳಬಾಗಿಲಿನ ದೋಸೆ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಕಾಂಗ್ರೆಸ್ನ ಸುಳ್ಳು ಗ್ಯಾರೆಂಟಿ ಯೋಜನೆ ಜಾರಿಗೆ ಬರುವುದಿಲ್ಲ. 2005 ರಿಂದ 2014ರವರೆಗೂ 10 ವರ್ಷ ಸುಳ್ಳು ಆಶ್ವಾಸನೆಗಳನ್ನು ನೀಡಿದೆ. ಕಾಂಗ್ರೆಸ್ ದೇಶದ 18 ಸಾವಿರ ಹಳ್ಳಿಗಳಿಗೆ ವಿದ್ಯುತ್ ನೀಡುತ್ತೇವೆ ಎಂದು ಆಶ್ವಾಸನೆ ನೀಡಿತ್ತು. ಆದರೆ, ಅನೇಕ ಹಳ್ಳಿಗಳು ವಿದ್ಯುತ್ ಇಲ್ಲದೆ ಕತ್ತಲಿನಲ್ಲಿ ಕಾಲ ಕಳೆದವು. ಕಾಂಗ್ರೆಸ್ ದೇಶದ ಜನಕ್ಕೆ ಮೋಸ ಮಾಡಿದೆ. ನಂತರ ನಾವು ಸಾವಿರ ದಿನಗಳಲ್ಲಿ 18 ಸಾವಿರ ಹಳ್ಳಿಗಳಿಗೆ ವಿದ್ಯುತ್ ಪೂರೈಸಿದ್ದೆವು ಎಂದರು.

## 11 ಜೀವ ಬಲಿಪಡೆದ ನಕ್ಸಲ್ ಭಾವಚಿತ್ರ ಬಿಡುಗಡೆ



ದಾಂತೇವಾಡ: ಸುಧಾರಿತ ಸ್ಫೋಟಕ ಬಳಸಿ 10 ಸೇನಾ ಸಿಬ್ಬಂದಿ ಹಾಗೂ ಓರ್ವ ನಾಗರಿಕನನ್ನು ಕೊಲಲ್ಪಟ್ಟಿದ್ದ ನಕ್ಸಲ್ ಮಾಸ್ಟರ್ ಮೈಂಡ್ನ ಛಾಯಾಚಿತ್ರ ಬಿಡುಗಡೆ ಮಾಡಿರುವ ಛತ್ತೀಸ್ಗಢ ಪೊಲೀಸರು ಮಾವೋವಾದಿಗಳ ಸುಳಿವು ನೀಡಿದವರಿಗೆ ನಗದು ಬಹುಮಾನ ಘೋಷಿಸಿದ್ದಾರೆ.

ದಾಂತೇವಾಡದ ಬಸ್ತಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಆರನ್ಪುರ ಸ್ಫೋಟದಲ್ಲಿ 11 ಮಂದಿ ಜೀವ ತೆಗೆದಿರುವ ನಕ್ಸಲ್ ನಾಯಕನನ್ನು ಜಗದೀಶ್ ಎಂದು ಗುರುತಿಸಲಾಗಿದ್ದು, ಆತನ ಭಾವಚಿತ್ರವನ್ನು ಸಾರ್ವಜನಿಕವಾಗಿ ಹಂಚಿಕೊಂಡಿರುವ ಪೊಲೀಸರು ಆತನ ಸುಳಿವು ನೀಡಿದವರಿಗೆ ನಗದು ಬಹುಮಾನ ನೀಡುವುದಾಗಿ ಘೋಷಿಸಿದ್ದಾರೆ.

ತನಿಖಾ ಸಂಶೋಧನೆಗಳ ಪ್ರಕಾರ, ಭಯಾನಕ ಮಾವೋವಾದಿ ಕೇಡರ್ ಜಗದೀಶ್ ಐಇಡಿ (ಸುಧಾರಿತ ಸ್ಫೋಟಕ ಸಾಧನ) ಸ್ಫೋಟವನ್ನು ಪ್ರಚೋದಿಸುವ ಯೋಜನೆಯನ್ನು ರೂಪಿಸಿದ್ದು, 10 ಡಿಆರ್ಜಿ ಸಿಬ್ಬಂದಿ ಮತ್ತು ನಾಗರಿಕ ಚಾಲಕನನ್ನು ದಾಂತೇವಾಡದಲ್ಲಿ ಕೊಲ್ಲಲಾಗಿ-ತ್ತು. ಜಗದೀಶ್ ಅವರ ಪತ್ನಿ, 8 ನೇ ತರಗತಿ ಉತ್ತೀರ್ಣರಾಗಿದ್ದಾರೆ ಮತ್ತು ಸುಕ್ಮಾ ಜಿಲ್ಲಾಯ ಹೇಮ್ಲಾ ಎಂದು ಗುರುತಿಸಲಾಗಿದೆ, ಅವರು ಕಾನೂನುಬಾಹಿರ ಸಂಘಟನೆಯ ದರ್ಭಾ ವಿಭಾಗದಲ್ಲಿ ವೈದ್ಯರ ತಂಡದ ಕಮಾಂಡರ್ ಆಗಿದ್ದಾರೆ.



## ಅಭಯ್ ಪಾಟೀಲ್ ಮತಯಾಚನೆ ರ್ಯಾಲಿ

ಬೆಳಗಾವಿ: ದಕ್ಷಿಣ ಮತಕ್ಷೇತ್ರದಲ್ಲಿ ಅಧಿಕೃತ ಅಭ್ಯರ್ಥಿಯಾದ ಬಿಜೆಪಿ ಪಕ್ಷದಿಂದ ಅಭಯ್ ಪಾಟೀಲ್ ಶಾಪುರ್ ಭಾಗದಲ್ಲಿ ಮತಯಾಚನೆ ರ್ಯಾಲಿ ಹಮ್ಮಿಕೊಂಡಿದ್ದರು.

ಕ್ಷೇತ್ರದ ಮತದಾರರು ಅಭಯ್ ಪಾಟೀಲ್ ಮತಯಾಚನೆ ಸಂದರ್ಭದಲ್ಲಿ ಮನೆ ಮನೆಗೆ ತೆರಳಿದಾಗ ಕ್ಷೇತ್ರದ ಮತದಾರರು ಮಾಲೆ ಹಾಕುತ್ತ ಹೂವಿನ ಸುರುಮಳೆಯನ್ನೇ ಸುರಿಸುತ್ತಾ ಮಹಿಳೆಯರು ಆರ್ಥಿ ಬೆಳಗುವ ಮುಖಾಂತರ ಅಭ್ಯರ್ಥಿ ಅಭಯ್ ಪಾಟೀಲರನ್ನು ಸ್ವಾಗತಿಸಿದರು

ಶಹಪುರ್ ಭಾಗದಲ್ಲಿ ಮತದಾರರು ಅಬ್ಬೆ ಪಾಟೀಲ-ರಿಗೆ ಬಿಜೆಪಿಗೆ ಮತ ನೀಡಲು ಅಭಯ ಪಾಟೀಲರನ್ನು ಸ್ವೀಟ್ ತಿಳಿಸುತ್ತಾ ಪಟಾಕಿ ಹಾರಿಸುತ್ತಾ ಆರ್ತಿ ಬೆಳಗಿಸಿ ಬೆಂಬಲಿಸಿದರು ಈ ಸಂದರ್ಭದಲ್ಲಿ ಕ್ಷೇತ್ರದ ಮತದಾರರು ಹಾಗೂ ಬಿಜೆಪಿ ಕಾರ್ಯಕರ್ತರು ರ್ಯಾಲಿಯಲ್ಲಿ ಭಾಗವಹಿಸಿದ್ದರು.

## ಉತ್ತರ ಕ್ಷೇತ್ರದಲ್ಲಿ ಕೆಆರ್‌ಪಿ ಪಕ್ಷದ ಅಭ್ಯರ್ಥಿ ಶಕ್ತಿ ಪ್ರವೀಣ ಹಿರೇಮಠ ಪ್ರದರ್ಶನ



ಬೆಳಗಾವಿ : ಗಾಲಿ ಜನಾರ್ಧನ್ ರೆಡ್ಡಿಯವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿಯಾಗಿ ಬೆಳಗಾವಿ ಉತ್ತರಕ್ಕೆ ಕಣಕ್ಕಿಳಿದಿರುವ ಪ್ರವೀಣ ಹಿರೇಮಠ ಭಾನುವಾರ ಬೃಹತ್ ಶಕ್ತಿ ಪ್ರದರ್ಶನ ನಡೆಸಿದ್ದಾರೆ.

ಬೆಳಗಾವಿಯ ಚೆನ್ನಮ್ಮ ವೃತ್ತದ ಮಹಾ ಗಣಪತಿ ದೇವಸ್ಥಾನಕ್ಕೆ ನಮಸ್ಕರಿ ರಾಣಿ ಚೆನ್ನಮ್ಮರವರ ಪಾದಕ್ಕೆ ನಮನ ಸಲ್ಲಿಸಿ ಚುನಾವಣಾ ಕಾಲ್ನಡಿಗೆ ರ್ಯಾಲಿ ಪ್ರಾರಂಭಿಸಿದ ಪ್ರವೀಣ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಶಕ್ತಿ ಪ್ರದರ್ಶಿಸಿದ್ದಾರೆ.

ಸರ್ವರಿಗೂ ಸಮ ಬಾಳು ಸರ್ವರಿಗೂ ಸಮ ಪಾಲು ಎಂದು ಹೇಳುವ ಮೂಲಕ ಬೆಳಗಾವಿ ಉತ್ತರಲ್ಲಿ ತನ್ನ ಪಕ್ಷದ ಪರ ಕಾಲ್ನಡಿಗೆ ರ್ಯಾಲಿ ನಡೆಸಿದ ಪ್ರವೀಣ ನಾವ ಯಾರುಗೂ ಕಮ್ಮಿ ಇಲ್ಲ ಎಂದು ಹೇಳಿ ಮುನ್ನುಗ್ಗಿದ್ದಾರೆ.

ಬೆಳಗಾವಿಯಲ್ಲಿ ಐಟಿ ಬಿಟಿ ಕನಸು ಕಂಡಿರುವ ಪ್ರವೀಣ ಬೆಳಗಾವಿಯನ್ನು ಐಟಿ ಬಿಟಿ ಹಬ ಮಾಡೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಬೆಳಗಾವಿ ಉತ್ತರದ ಸರ್ದಾರ ಕಾಲೇಜನಿಂದ ಪ್ರಾರಂಭವಾದ ರ್ಯಾಲಿ ಕಾಕತಿವೇಸ,ಶನಿವಾರ ಕೂಟ,ಗಣಪತಿ ಗಲ್ಲಿ ,ಮಾರುತಿ ಗಲ್ಲಿ ,ಸಮಾದೇವಿ ಗಲ್ಲಿ ,ಗಣಾಚಾರಿ ಗಲ್ಲಿ ,ಕಂಗ್ರಾಳ ಗಲ್ಲಿಯಿಂದ ಸನ್ಮಾನ ಹೋಟೆಲ ಹತ್ತಿರ ಮುಕ್ತಾಯ ಗೊಂಡಿದೆ.

## ಲಕ್ಷ್ಮೀ ಹೆಬ್ಬಾಳಕರ ಸೋಲಿನ ಭಯದಿಂದ ಹತಾಶರಾಗಿ ಬಿಜೆಪಿ ವಿರುದ್ಧ ಆರೋಪ ಮಾಡುತ್ತದ್ದಾರೆ



ಬೆಳಗಾವಿ : ಕಾಂಗ್ರೆಸ್ ಪಕ್ಷದ 50 ಅಭ್ಯರ್ಥಿಗಳ ವಿರುದ್ಧ ಐಟಿ ಮತ್ತು ಲೋಕಾಯುಕ್ತ ದಾಳಿ ನಡೆಯಲಿದೆ ಎಂಬ ಕಾಂಗ್ರೆಸ್ ನಾಯಕಿ ಲಕ್ಷ್ಮೀ ಹೆಬ್ಬಾಳಕರ ಅವರ ಆರೋಪಕ್ಕೆ ಬಿಜೆಪಿ ಉತ್ತರ ಕ್ಷೇತ್ರದ ಅಭ್ಯರ್ಥಿ ಡಾ. ರವಿ ಪಾಟೀಲ, ಮುಖಂಡ ಮುರುಗೇಂದ್ರ ಗೌಡ ಪಾಟೀಲ ತಿರುಗೇಟು ನೀಡಿದ್ದು, ಈ ಹಿಂದೆ ಆಡಳಿತ ನಡೆಸಿದ್ದ ಅವಧಿಯಲ್ಲೂ ಕಾಂಗ್ರೆಸಿಗರು ವ್ಯವಸ್ಥೆಯನ್ನು ಈ ರೀತಿಯಾಗಿ ದುರುಪಯೋಗ ಮಾಡಿಕೊಂಡಿದ್ದಾರಾ ಎಂದು ಪ್ರಶ್ನಿಸಿದ್ದಾರೆ.

ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಈ ಬಾರಿ ಸೋಲಿನ ಭಯ ಕಾಡುತ್ತಿದೆ. ನಾನು ಸೋಲುವುದು ಖಚಿತ ಎಂಬ ಹತಾಶ ಭಾವನೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಅವರು ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿ ವಿರುದ್ಧ ಆರೋಪ ಮಾಡಿದ್ದಾರೆ. ಬೆಳಗಾವಿ ಗ್ರಾಮೀಣ ಮತಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ನಾಯಕಿ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ರಮೇಶ ಜಾರಕಿಹೊಳಿ ಅವರ ನೇತೃತ್ವದಲ್ಲಿ ಸಂಪೂರ್ಣವಾಗಿ ಬಿಜೆಪಿಮಯವಾಗಿದೆ. ಹೀಗಾಗಿ ಹೆಬ್ಬಾಳಕರ ಈಗ ಬಿಜೆಪಿ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಈ ಮೂಲಕವಾಗಿ ಜನರಿಂದ ಅನುಕಂಪ ಪಡೆಯಲು ಹಾಗೂ ಜನರನ್ನು ಹಾದಿ ತಪ್ಪಿಸಲು ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪ ಮಾಡಿದರು. ಬಿಜೆಪಿ ಎಂದಿಗೂ ದ್ವೇಷ ರಾಜಕಾರಣ ಮಾಡುವುದಿಲ್ಲ. ಭ್ರಷ್ಟರು, ಕಳ್ಳರು ಇದ್ದರೆ ಅಂತವರನ್ನು ಸಹ ಬಿಜೆಪಿ ಬಿಡದು. ಕಾಂಗ್ರೆಸ್ ಪಕ್ಷ ಇಷ್ಟೊಂದು ವರ್ಷಗಳ ಕಾಲ ಅಧಿಕಾರದಲ್ಲಿತ್ತು. ಆಗ ಅವರು ಲೋಕಾಯುಕ್ತ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

## ಪ್ರಧಾನಿ ಮೋದಿಗೆ ಚಾಲೆಂಜ್ ಹಾಕಿದ ಮಾಜಿ ಸಿಎಂ ಸಿದ್ದರಾಮಯ್ಯ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಯವರು ಸಿದ್ಧರಿದ್ದರೆ ಅವರ ಜೊತೆಗಿನ ಓಟದ ಸ್ಪರ್ಧೆಗೆ ನಾನು ಸಿದ್ಧನಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿ ಸಕ್ರಿಯ ರಾಜ-ಕಾರಣದಿಂದ ನಾನು ದೂರ ಸರಿದಿಲ್ಲ ಎಂದಿರುವ ಅವರು ಮೋದಿಗೆ ಈ ಚಾಲೆಂಜ್ ಹಾಕಿದ್ದಾರೆ. ಟ್ವೀಟ್ನಲ್ಲೇನಿದೆ..? ಪ್ರಧಾನಿ ಅವರು ಏನನ್ನು ಹೇಳಲಿಕ್ಕೆ ಹೊರಟಿದ್ದಾರೆ? ಬಿ.ಎಸ್ ಯಡಿಯೂರಪ್ಪನವರನ್ನು ವಯಸ್ಸಿನ ಕಾರಣಕ್ಕಾಗಿ ಮುಖ್ಯಮಂತ್ರಿ ಸ್ಥಾನದಿಂದ ಅವಮಾನಕಾ-ರಿಯಾಗಿ ಕಿತ್ತುಹಾಕಿದ ಬಿಜೆಪಿ, ಈಗ ಅವರನ್ನೇ ಮುಂದಿಟ್ಟುಕೊಂಡು ಮತಯಾಚನೆ ಮಾಡುತ್ತಿರುವುದಕ್ಕೆ ಕಾರಣ ಅವರ ಮೇಲಿನ ಗೌರವವೇ? ಅಥವಾ ಅನುಕಂಪ ಗಳಿಕೆಯ ತಂತ್ರವೇ ಎಂದು ಪ್ರಶ್ನಿಸಿದ್ದಾರೆ.

## ಬಿಜೆಪಿ ಅಭ್ಯರ್ಥಿ ಡಾ.ರವಿ ಪಾಟೀಲರಿಂದ ಭರ್ಜರಿ ಪ್ರಚಾರ

ಬೆಳಗಾವಿ : ರವಿವಾರ ಕಂಗ್ರಾಳಿ ಗಲ್ಲಿ ಭರ್ಜರಿ ಪ್ರಚಾರ ಪ್ರಾರಂಭಿಸಿದರು. ಸಾರ್ವತ್ರಿಕ ಚುನಾವಣೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಉಳದಿದ್ದು ಅಧಿಕೃತ ಅಭ್ಯರ್ಥಿಗಳ ಪ್ರಚಾರ ಜೋರಾಗಿದೆ.ಹೂ ಮಳೆ ಗೈದು ಸ್ವಾಗತಿಸಿದ ಕಾರ್ಯ ಕರ್ತರು ವಾದ್ಯ ಮೇಳಗಳ ಸಡ್ಡು ಜೋರಾಗಿತ್ತು.

ರವಿವಾರ ಬೆಳಿಗ್ಗೆ ಇಂದ ಮತಬೇಟೆಗೆ ಇಳಿದ ಬಿಜೆಪಿ ಅಭ್ಯರ್ಥಿ ಡಾ. ರವಿ ಪಾಟೀಲ್ ಕಂಗ್ರಾಳ ಗಲ್ಲಿ,ಕಾಕತಿವೆಸ್ ರೋಡ್, ಡಾ ಬಾಬಾ ಸಾಹೇಬ್ ಅಂಬೇಡ್ಕರ್ ರೋಡ್,ಗೊಂದಲಿ ಗಲ್ಲಿ,ಗವಳಿ ಗಲ್ಲಿ, ಗನಾಚಾರಿ ಗಲ್ಲಿ ರಾಮದೇವ್ ಗಲ್ಲಿ,ಕಡೆ ಬಜಾರ್ ರೋಡ್,ಆನ್ ಸುರ್ಕರ್ ಗಲ್ಲಿ ಇನ್ನು ಹಲವು ಕಡೆಗಳಲ್ಲಿ ನಡೆಯಿತು.



ಬೆಳಗಾವಿ ಉತ್ತರ ವಿಧಾನಸಭಾ ಮತಕ್ಷೇತ್ರದ ಡಾ ರವಿ ಪಾಟೀಲ್ ಪರವಾಗಿ ಪ್ರಚಾರಕ್ಕಿಳಿದರು ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು ಈಗಾಗಲೇ ಜನಗಳು ಅಭೂತಪೂರ್ವ ಬೆಂಬಲ ಸೂಚಿಸುತ್ತಿದ್ದಾರೆ.

ಜನಗಳು ಸ್ವಯಂ ಪ್ರೇರಿತರಾಗಿ ಪ್ರಚಾರದಲ್ಲಿ ಭಾಗ ವಹಿಸುತ್ತಿದ್ದಾರೆ ಕಾರ್ಯಕರ್ತರು ಬಲವೆ ನಮ್ಮ ಶಕ್ತಿ ಎಂದು ಹೇಳಿದರು ಇನ್ನು ಈಗಾಗಲೇ ಬಿಜೆಪಿ ನಾಯಕರು ರಾಜ್ಯ ಆಗಮಿಸುತ್ತಿದ್ದು ಕಾರ್ಯಕರ್ತರಲ್ಲಿ ಮತ್ತಷ್ಟು ಉತ್ಸಾಹ ತುಂಬಲಿದೆ ಎಂದು ಹೇಳಿದರು.

ಇನ್ನು ಬಿಜೆಪಿ ಅಭ್ಯರ್ಥಿ ಡಾ ರವಿ ಪಾಟೀಲ್ ಮಾತನಾಡಿ ಜನಗಳು ಸ್ವಇಚ್ಛೆ ಇಂದ ಬರುತ್ತಿದ್ದಾರೆ ಉತ್ತಮ ಸ್ಪಂದನೆ ನೀಡುತ್ತಿದ್ದಾರೆ.

ಈಬಾರಿ ರಾಜ್ಯದಲ್ಲಿ ಮತ್ತೆ ಕಮಲ ಅರಳುವುದು ಶತಶಿದ್ದ ಎಂದು ಹೇಳಿದರು. ಶರತ ಪಾಟೀಲ್ ರಂಜಿತ ರೋಕಡೆ, ಬಾಭುರಾವ ಕುಟ್ರೆ, ಗೋಪಾಲ ಸಾಂಬ್ರೇಕರ್, ಇನ್ನು ಮುಂತಾದವರು ಉಪಸ್ಥಿತರಿದ್ದರು.

**Self Declaration**

Format C-1

Declaration about Criminal Cases

Name of address of Candidate: **Basappa Kumbar**

Name of the Political Party : Karnataka Rashtra Samithi

Karnataka State Legislative Assembly – 2023

Name of Constituency: **Ramdurga**

I, **Basappa Kumbar**, a candidate for the above mentioned election, declare for public information the following details about my criminal antecedents.

(A) Pending criminal cases

| Sl No | Name of Court | Case No. and date | Status of cases(s) | Section of Acts concerned and brief description of offense(s) |
|---|---|---|---|---|
| 1 | JMFC, Savadatti | 34/2020 | Pending | 353, Obstruction to Govt. official |

**From.**

**Basappa kumbar**

**Karnataka state Legislative Assembly**


**Ramduag**




## ಕಾಂಗ್ರೆಸ್ ಜನಪರ ಪಕ್ಷ, ಕಾಂಗ್ರೆಸ್‌ನಿಂದಲೇ ಸರ್ವ ಜನಾಂಗದ ಜನರ ಅಭಿವೃದ್ಧಿ: ನಾರಾ ಭರತ್ ರೆಡ್ಡಿ

ಬಳ್ಳಾರಿ: ಕಾಂಗ್ರೆಸ್ ಬಡವರ, ಮಹಿಳೆಯರ, ರೈತರ, ಕಾರ್ಮಿಕರ, ವೃತ್ತಿಪರರ ಎಲ್ಲಾ ಜಾತಿ ಧರ್ಮದ ಜನರ ಕಲ್ಯಾಣ ಮಾಡುವಂತಹ ಜನಪರ ಪಕ್ಷ ಎಂದು ಬಳ್ಳಾರಿ ನಗರ ಕಾಂಗ್ರೆಸ್ ಅಭ್ಯರ್ಥಿ ನಾರಾ ಭರತ್ ರೆಡ್ಡಿ ಹೇಳಿದರು. ಭಾನುವಾರ ಬೆಳಿಗ್ಗೆ ಬಳ್ಳಾರಿ ನಗರ ಕ್ಷೇತ್ರ ವ್ಯಾಪ್ತಿಯ ಕುರಹಟ್ಟಿ, ಹಾವಂಭಾವಿಯಲ್ಲಿ ಮತಯಾಚನೆ ನಡೆಸಿ ಸ್ಥಳೀಯರನ್ನುದ್ಧೇಶಿಸಿ ಮಾತನಾಡಿದರು.ಸಾಮಾಜಿಕ ನ್ಯಾಯದ ತತ್ವದಡಿ ವಿಶ್ವಾಸವಿಟ್ಟಿರುವ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಾತ್ರ ಸರ್ವ ಜನಾಂಗದ ಜನರ ಅಭಿವೃದ್ಧಿ ಸಾಧ್ಯ. ಕಾಂಗ್ರೆಸ್ ಸೌಹಾರ್ದತೆಯಲ್ಲಿ ನಂಬಿಕೆ ಇಡುವ ಪಕ್ಷವಾಗಿದೆ. ಇಂದು ಇಂತಹ ಐತಿಹಾಸಿಕ ಪಕ್ಷ ನನಗೆ ಬಳ್ಳಾರಿ ನಗರದಿಂದ ಸ್ಪರ್ಧೆ ಮಾಡಲು, ಗೆದ್ದು ಬಂದು ಸೇವೆ ಮಾಡಲು ಅವಕಾಶ ನೀಡಿದೆ. ನೀವು ಇದೇ ಮೇ,10ರಂದು ನಡೆಯುವ ಮತದಾನದ ದಿನದಂದು ಮತಗಟ್ಟೆಗಳಿಗೆ ತೆರಳಿ ಹಸ್ತದ ಗುರುತಿಗೆ ಮತ ನೀಡುವ ಮೂಲಕ ನಿಮ್ಮ ಸೇವೆ ಮಾಡಲು ಅವಕಾಶ ನೀಡಬೇಕು ಎಂದರು.

ಇವತ್ತು ರಾಜ್ಯ ಕಾಂಗ್ರೆಸ್ ವತಿಯಿಂದ ಐದು ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಈ ಹಿಂದೆ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ನೂರಾರು ಜನಪರ ಯೋಜನೆಗಳನ್ನು ಜಾರಿಗೆ ತಂದು ಜನರ ಅಭಿವೃದ್ಧಿ ಮಾಡಿದ್ದರು. ಈಗ ಅದೇ ರೀತಿ ಚುನಾವಣೆಗೂ ಮೊದಲು ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಲಾಗಿದೆ ಎಂದರು.ಪ್ರತಿ ಕುಟುಂಬದ ಯಜಮಾನಿಗೆ ಮಾಸಿಕ 2 ಸಾವಿರ ರೂ.ಗಳು, ಪ್ರತಿ ಕುಟುಂಬಕ್ಕೆ 200 ಯುನಿಟ್ ಉಚಿತ ವಿದ್ಯುತ್, ಬಿಪಿಎಲ್ ಚೀಟಿ ಇರುವ ಕುಟುಂಬದ ಪ್ರತಿ ಸದಸ್ಯನಿಗೆ 10 ಕೆಜಿ ಅಕ್ಕಿ, ನಿರುದ್ಯೋಗಿ ಪದವೀಧರ–ರಿಗೆ ಯುವನಿಧಿ ಅಡಿ ಭತ್ಯೆ, ರಾಜ್ಯದ 25 ಸಾವಿರ ಪೌರ ಕಾರ್ಮಿಕರ ನೇಮಕಾತಿ ಹಾಗೂ ರಾಜ್ಯದ ಎಲ್ಲ ಮಹಿಳೆಯರಿಗೆ ಸರ್ಕಾರಿ ಸಾರಿಗೆ ಬಸ್ ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿ ಕೊಡುವ ಜನಪರ ಯೋಜನೆಗಳನ್ನು ನಮ್ಮ ಸರ್ಕಾರ ಬಂದ ಮೇಲೆ ಕೊಟ್ಟ ಮಾತಿನಂತೆ ಜಾರಿಗೆ ತರಲಿದೆ ಎಂದು ಹೇಳಿದ ಭರತ್ ರೆಡ್ಡಿ, ಬಳ್ಳಾರಿ ನಗರದಲ್ಲಿ ಜನರಿಗೆ ಮನೆಗಳಿಗೆ ಪಟ್ಟಾ ಇಲ್ಲ. ಶಾಸಕನಾಗಿ ಆಯ್ಕೆಯಾದ ನಂತರ ನಾನು ಮನೆಗೆ ಬಂದು ಪಟ್ಟಾ ಕೊಡುವೆ ಇದು ನನ್ನ ಭರವಸೆ. ದೇವರ ಸಾಕ್ಷಿಯಾಗಿ ಈ ಕೆಲಸ ಮಾಡುವೆ ಎಂದರು.ಸ್ಥಳೀಯ ಮುಖಂಡ ಲೋಕೇಶ್ ಸೇರಿದಂತೆ ಚಾನಾಳ್ ಶೇಖರ್ ಮೊದಲಾದವರು ಹಾಜರಿದ್ದರು.



## ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದ ಕಾಂಗ್ರೆಸ್ ಪಕ್ಷದ ಮುಖಂಡರು

ಬಳ್ಳಾರಿ: ಬಳ್ಳಾರಿ ಜಿಲ್ಲೆಯ ಕಂಪ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಮ್ಮಿಗನೂರು ಗ್ರಾಮದ ನೂರಾರು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ಯುವಕರು ಕಾಂಗ್ರೆಸ್ ಪಕ್ಷವನ್ನು ತೊರೆದು ನಮ್ಮ ಭಾರತಿಯ ಜನತಾ ಪಕ್ಷದ ತತ್ವ–ಸಿದ್ಧಾಂತ ಮತ್ತು ಟಿ ಹೆಚ್ ಸುರೇಶ್ ಬಾಬುರವರ ಅಭಿವೃದ್ಧಿ ಪರ ಚಿಂತನೆಗಳನ್ನು ಮೆಚ್ಚಿ ನಮ್ಮ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಯಾದರು.

ನೂತನವಾಗಿ ಪಕ್ಷ ಸೇರ್ಪಡೆಯಾದ, ಎಲ್ಲರನ್ನೂ ಅಭಿನಂದಿಸಿ ಅವರ ರಾಜಕೀಯ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು. ಇದೇ ವೇಳೆ ಎಮ್ಮಿಗನೂರು ಗ್ರಾಮದ ವಿವಿಧ ವಾರ್ಡ್ ಗಳ ಮನೆ ಮನೆಗೆ ಭೇಟಿ ನೀಡಿ ತಮ್ಮ ಅಧಿಕಾರ ಅವಧಿಯ ಜನಪರ ಯೋಜನೆಗಳ ಕು–ರಿತು ಮಾಹಿತಿ ನೀಡಿ ಮತ್ತೊಮ್ಮೆ ಕಂಪ್ಲಿ ಕ್ಷೇತ್ರದ ಅಭಿವೃದ್ಧಿಗಾಗಿ ಬಿಜೆಪಿ ಪಕ್ಷವನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಸ್ಥಳೀಯ ಮುಖಂಡರು ಪಕ್ಷದ ಹಿರಿಯ ಕಾರ್ಯಕರ್ತರು ಅಭಿಮಾನಿಗಳು ಜೊತೆಯಲ್ಲಿದ್ದರು.

## ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಬಿಜೆಪಿ ಮುಖಂಡರು

ಬಳ್ಳಾರಿ: ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕೊಳಗಲ್ ಬಿಜೆಪಿ ಪಕ್ಷದ ಮುಖಂಡರಾದ ಊಳೂರು ವೆಂಕಟೇಶ್, ಉಪ್ಪಾರ್ ನಾಗರಾಜ್, ಊಳೂರು ರಮೇಶ್, ಸಂಡೂರು ಎರ್ರಿಸ್ವಾಮಿ, ಮುಕ್ಕಣ್ಣನವರ ಈಶ್ವರ, ಸಂಡೂರು ದೊಡ್ಡ ಬಸಯ್ಯ, ಊಳೂರು ಈರಣ್ಣ, ರಾಜ, ಸಂಡೂರು ವೀರೇಶ್, ವಡ್ಡರ್ ದಿವಾಕರ, ವಡ್ಡರ್ ರುದ್ರ, ತಿಮ್ಮ, ಸುರೇಶ್, ಸೀನಪ್ಪ, ಮಹೇಶ್, ಶೇಖರ್, ಶಿವರುದ್ರ, ಎರ್ರಿಸ್ವಾಮಿ ನಾಗರಾಜ್, ತಿಪ್ಪೇಸ್ವಾಮಿ, ತಿಪ್ಪೇಶ್, ವೀರಭದ್ರ, ನಾಗೇಂದ್ರ, ರಾಜ್, ತೆಕ್ಕಲಕೋಟೆ ವೀರೇಶ್, ವೀರೇಶ್ ಗೌಡ, ಅವಿನಾಶ್ ರೆಡ್ಡಿ, ರಾಮಾಂಜಿನಿ, ನರಸಿಂಹ, ಮೂಕಮ್ಮನವರ ವೀರೇಶ್, ತಟ್ಟ ವೀರೇಶ್, ಶರಣ, ಸೂರಿ, ಮಲ್ಲಯ್ಯ ಸೇರಿದಂತೆ ಇನ್ನೂ ಅನೇಕ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರ ನೇತೃತ್ವದಲ್ಲಿ ಬಿಜೆಪಿ ಪಕ್ಷವನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಬಿಜೆಪಿ ಪಕ್ಷವನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಬಿಜೆಪಿ ಮುಖಂಡರನ್ನು ಬಳ್ಳಾರಿ ಗ್ರಾಮಾಂತರ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಬಿ.ನಾಗೇಂದ್ರ



ಅವರು ತುಂಬು ಹೃದಯದಿಂದ ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸಿದರು.

ಬಳಿಕ ಮಾತನಾಡಿದ ಮಾನ್ಯ ಶಾಸಕ ಬಿ.ನಾಗೇಂದ್ರ ಅವರು ಗ್ರಾಮೀಣ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದಿಂದ ಬಹಳಷ್ಟು ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಬರುವವರಿದ್ದಾರೆ. ಜನರ ಸೇವೆ ಮಾಡಲು ಆಸಕ್ತಿ ಇರುವವರು ಯಾರು ಬೇಕಾದರೂ ಕಾಂಗ್ರೆಸ್ ಪಕ್ಷಕ್ಕೆ ಬರಬಹುದು ಎಂದು ಕರೆ ನೀಡಿದರು.

ನಮ್ಮ ಪಕ್ಷ ರಾಜ್ಯದಲ್ಲಿ ಮುಂಬರುವ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ, ಪ್ರತಿ ಕುಟುಂಬದ ಮಹಿಳೆಗೆ ಮಾಸಿಕ 2000 ರೂ, ಪ್ರತಿ ಕುಟುಂಬಕ್ಕೆ ಮಾಸಿಕ 200 ಯುನೀಟ್ ವಿದ್ಯುತ್ ಉಚಿತವಾಗಿ ನೀಡಲಿದೆ.

ಅಲ್ಲದೆ ಮಾಸಿಕ ಪ್ರತಿ ವ್ಯಕ್ತಿಗೆ 10 ಕಿಲೋ ಅಕ್ಕಿ ನೀಡಲಿದೆ ಮತ್ತು ಯುವಜನತೆಯ ಉಜ್ವಲ ಭವಿಷ್ಯಕ್ಕಾಗಿ 2ವರ್ಷಗಳವರೆಗೆ ನಿರುದ್ಯೋಗಿ ಪದವೀಧರರಿಗೆ ರೂ. 3,000 ಹಾಗೂ ನಿರುದ್ಯೋಗಿ ಡಿಪ್ಲೋಮೊ ಪದವೀಧರರಿಗೆ ಪ್ರತಿ ತಿಂಗಳು ರೂ.1,500 ನಿರುದ್ಯೋಗ ಭತ್ಯೆ ನೀಡಲಿದೆಂದು ಗ್ಯಾರೆಂಟಿ ಕೊಡುವುದಾಗಿ ಹೇಳಿದರು.

ಕಾಂಗ್ರೆಸ್ ಪಕ್ಷ ಈ ಬಾರಿ ಅಧಿಕಾರಕ್ಕೆ ಬಂದೇ ಬರುತ್ತೆ ಬಂದರೆ ನಾವೇನು ಗ್ಯಾರೆಂಟಿ ಕೊಡುತ್ತೇವೆಂದು ಮಾನ್ಯ ಶಾಸಕ ಬಿ.ನಾಗೇಂದ್ರ ತಿಳಿಸಿದರು.ಪ್ರತಿಯೊಬ್ಬರೂ ಕಾಂಗ್ರೆಸ್ ಬೆಂಬಲಿಸಿ ಆರ್ಶಿವಾದಿಸಬೇಕು ಎಂದು ಶಾಸಕ ಬಿ.ನಾಗೇಂದ್ರ ಅವರು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ನಂತರ ಮುಖಂಡರು ನಾವು ಮಾನ್ಯ ಶಾಸಕರ ಅಭಿವೃದ್ಧಿ ಕಾರ್ಯಗಳನ್ನು ಪರಿಗಣಿಸಿ ನಿಮ್ಮ ಬೆಂಬಲಕ್ಕಾಗಿ ವಾರ್ಡಿನ ಬೆಳವಣಿಗೆಗಾಗಿ ಬಿಜೆಪಿ ಪಕ್ಷವನ್ನು ತೊರೆದು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಸೇರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಶಾಸಕ ಬಿ.ನಾಗೇಂದ್ರ ಅವರ ಅಭಿಮಾನಿಗಳು ಉಪಸ್ಥಿತರಿದ್ದರು.

## 3 ನೇ ವಾರ್ಡಿನಲ್ಲಿ ಮಿಂಚಿನ ಪ್ರಚಾರ ನಡೆಸಿದ ಲಕ್ಷ್ಮಿ ಅರುಣ



ಬಳ್ಳಾರಿ ಏ 30. ಬಳ್ಳಾರಿ ನಗರದ 3 ನೇ ವಾರ್ಡಿನ ಗೌಳೇರಹಟ್ಟಿಯಲ್ಲಿ ಕೆಆರ್‌ಪಿಪಿ ಬಳ್ಳಾರಿ ನಗರ ಅಭ್ಯರ್ಥಿ ಲಕ್ಷ್ಮಿ ಅರುಣ ಅವರು ಮನೆ ಮನೆಗೆ ತೆರಳಿ ಪ್ರಚಾರ ನಡೆಸಿದರು. ಸ್ಥಳೀಯರು ನನಗೆ ತೋರಿಸಿದ ಪ್ರೀತಿಗೆ ಚಿರಋಣಿಯಾಗಿದ್ದೇನೆ ಎಂದರು. ಈ ಸಂದರ್ಭದಲ್ಲಿ ಮಹಿಳಾ ಘಟಕದ ಅಧ್ಯಕ್ಷರಾದ ಹಂಪಿರಮಣ, ಸಾಮಾಜಿ–ಕ ಜಾಲತಾಣದ ಅಧ್ಯಕ್ಷರಾದ ಮಲ್ಲಿಕಾರ್ಜುನಚಾರ್, ಬಳ್ಳಾರಿ ನಗರ ಘಟಕದ ಅಧ್ಯಕ್ಷರಾದ ಸುನೀಲ್ ಕುಮಾರ ರೆಡ್ಡಿ. ವಾರ್ಡ್ ಮುಖಂಡರಾದ ಚಂದ್ರ, ಶ್ರೀಮತಿ ರೂಪ, ರಾಜೇಶ್ವರಿ, ಗೌಳೇರ ಸಮಾಜದ ನಾಗರಾಜ, ರಾಜ್ ಪ್ಯಾಷನ್ಸ್ ಅನ್ವರ್,ಕಲೀಮ್ ಗೋಲ್ಡ್, ವಲಿ, ಮಂಜು, ಅಜಯ್, ರವಿ, ಚಿನ್ನ, ಶಶಿ. ಇನ್ನೂ ಅನೇಕ ಪಕ್ಷದ ಮುಖಂಡರು ಕಾರ್ಯಕ್ರ್ತರು ಭಾಗವಹಿಸಿದರು.

## ಸಂಭ್ರಮದಿಂದ ಶ್ರೀ ಶಿವಬೋಧಸ್ವಾಮಿಗಳ ಪಲ್ಲಕ್ಕಿ ಉತ್ಸವ

**ಮೂಡಲಗಿ:** ಭಾವೈಕತೆಗೆ ಹೆಸರಾಗಿರುವ ಮೂಡಲಗಿ ಪಟ್ಟಣದ ಆರಾಧ್ಯ ದೈವ ಶ್ರೀ ಶಿವಬೋಧಸ್ವಾಮಿಗಳ ಪುಣ್ಯಾರಾಧನೆ ಹಾಗೂ ಜಾತ್ರಾಮಹೋತ್ಸವ ನಿಮಿತ್ಯ ಶ್ರೀಗಳ ಪಲ್ಲಕ್ಕಿ ಉತ್ಸವ ರವಿವಾರದಂದು ಶ್ರೀಮಠದ ಪೀಠಾಧಿಪತಿಗಳಾದ ಶ್ರೀ ದತ್ತಾತ್ರೇಯಬೋಧ ಸ್ವಾಮಿಜಿ ಮತ್ತು ಶ್ರೀ ಶ್ರೀಧರಬೋಧ ಸ್ವಾಮಿಜಿ ಸಾನ್ನಿಧ್ಯದಲ್ಲಿ ಅಪಾರ ಜನಸ್ತೋಮ ಮಧ್ಯೆ ಸಡಗರ ಸಂಭ್ರಮದಿಂದ ಜರುಗಿತು.

ಶನಿವಾರ ಮಧ್ಯರಾತ್ರಿಯಿಂದ ರವಿವಾರ ಮುಂಜಾನೆವರಿಗೆ ಶ್ರೀಗಳ ಮಠದವರಿಗೆ ಸಹಸ್ರಾರು ಭಕ್ತರು ತಮ್ಮ ತಮ್ಮ ಮನೆಯಿಂದ ಮತ್ತು ಶ್ರೀ ಯಲ್ಲಮ್ಮ ದೇವಸ್ಥಾನದಿಂದ ದೀರ್ಘದಂಡ ನಮಸ್ಕಾರ ಮತ್ತು ಉರುಳು ಸೇವೆ ಸಲ್ಲಿಸಿ ತಮ್ಮ ಹರಕೆ ತೀರಿಸಿದರು.

ರವಿವಾರ ಮಧ್ಯಾಹ್ನ 12 ಗಮಟೆಯಿಂದ ಶ್ರೀಗಳ ಮೇಲಿನ ಮಠದಲ್ಲಿ ಶ್ರೀಗಳ ಉತ್ಸವ ಮೂರ್ತಿಗೆ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿಸಿ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಶ್ರೀಗಳ ಮೂರ್ತಿಯೊಂದಿಗೆ ಪಲ್ಲಕ್ಕಿ ಉತ್ಸವ ಕೆಳಗಿನ ಮಠ



ದವರಿಗೆ ಅಪಾರ ಜನಸ್ತೋಮದ ಜಯಕಾರದೊಂದಿಗೆ ಮತ್ತು ಕರಡಿ ಮಜಲು, ಝಾಂಜ ಪಥಕ ಹಾಗೂ ವಿವಿಧ ವಾದ್ಯ ವೃಂದ ಗಳೊಂದಿಗೆ ವಿಜೃಂಭಣೆಯಿಂದ ಕೆಳಗಿನ ಮಠಕ್ಕೆ ಸಾಗಿ ಶ್ರೀಮಠದಲ್ಲಿ ಶ್ರೀಗಳ ಉತ್ಸವ ಮೂರ್ತಿಯನ್ನು ಸ್ಥಾಪಿಸಿ ನಂತರ ಅಭಿ?ೀಕ ಹಾಗು ಪೂಜೆಸಲ್ಲಿಸಿದರು.

ಪಲ್ಲಕ್ಕಿ ಉತ್ಸವದಲ್ಲಿ ಭಕ್ತರು ಬೆಂಡು–ಬೇತ್ತಾಸು ಸಮರ್ಪಿಸಿದರು, ಉತ್ಸವದ ದಾರಿಯಲ್ಲಿ ಭಕ್ತರು ನೀರು ಹಾಕಿ ಫಲ ಪುಷ್ಪ ನೀಡಿ ಶ್ರೀ ದತ್ತಾತ್ರೇಯಬೋಧ ಸ್ವಾಮಿಜಿ ಮತ್ತು ಶ್ರೀ ಶ್ರೀಧರಬೋಧ ಸ್ವಾಮಿಜಿ ಆಶೀರ್ವಾದ ಪಡೆದುಕೊಂಡು ಪುನಿತರಾದರು.




ಕಾಗವಾಡ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ ಶಿರಗುಪ್ಪಿ ಗ್ರಾಮದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿ ಶ್ರೀಮಂತ ಪಾಟೀಲರ ಪರ ಬಿಜೆಪಿ ಪಕ್ಷದ ಮುಖಂಡರಾದ ಅಭಯಕುಮಾರ ಅಕಿವಾಟೆ, ಶಿವಾನಂದ ಪಾಟೀಲ, ಭಮ್ಮಣ್ಣ ಚೌಗುಲೆ, ಶಿವಾನಂದ ನವನಿಹಾಳ್, ಸುಭಾಷ ಮೋನೆ, ಚಂದ್ರಕಾಂತ ಬಾಡಗೆ, ಸೇರಿದಂತೆ ಅನೇಕರು ಗ್ರಾಮದ ಒಣಿ, ಒಣಿಗಳಲ್ಲಿ ತರಳಿ ಮತಯಾಚನೆ ಮಾಡುತ್ತಿರುವ ದೃಶ್ಯ.

## ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಭೂಮಿಗೆ ನೀರಾವರಿ ಸೌಲಭ್ಯ: ಎ.ಬಿ ಪಾಟೀಲ

**ಸಂಕೇಶ್ವರ:** ತಾವು ಶಾಸಕರಾಗಿ ಆಯ್ಕೆಯಾದರೆ ಸಂಕೇಶ್ವರ ಮತ್ತು ಹುಕ್ಕೇರಿ ಹೋಬಳಿಗಳ ಎಲ್ಲ ಗ್ರಾಮಗಳ ಹೊಲಗಳಿಗೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಕಾಂಗ್ರೆಸ್ ಪಕ್ಷದ ಅಭ್ಯಥರ್? ಎ.ಬಿ.ಪಾಟೀಲ ಹೇಳಿದರು.

ಅವರು ಸಂಕೇಶ್ವರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಚಿತ್ರಿ ನದಿಯಿಂದ ಹಿರಣ್ಯಕೇಶಿ ನದಿಗೆ ವರ್ಷದ 12 ತಿಂಗಳೂ ನೀರು ಹರಿಸಲಾಗುವುದು.ಸಂಕೇಶ್ವರ, ಹುಕ್ಕೇರಿ ಹಾಗೂ ಹಿಡಕಲ್ಡ್ಯಾಂಗಳಲ್ಲಿ ಸೂಪರ ಸ್ಪೆಶಾಲಿಟಿ ಆಸ್ಪತ್ರೆಗಳನ್ನು ಪ್ರಾರಂಭಿಸಿ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡುವುದು, ಎಲ್ಲ ಗ್ರಾಮಗಳಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವುದು,ರೈತರ ಹೊಲಗಳಿಗೆ ಸಂಪರ್ಕ ರಸ್ತೆ ನಿಮರ್?ಣ, ಪ್ರತಿ ಗ್ರಾಮಕ್ಕೂ ಶುದ್ದ ಕುಡಿಯುವ ನೀರಿನ ಪೂರೈಕೆ, ಹೊಸದಾಗಿ ಸಕರ್?ರಿ ಪ್ರೌಢ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ ಆರಂಭ, ಹೊಸ ಉದ್ಯೋಗ ಸೃಷ್ಟಿಸಲು ಕೈಗಾರಿಕೆಗಳ ಸ್ಥಾಪನೆ, ವ್ಯಾಯಾಮ ಶಾಲೆ, ಉದ್ಯಾನವನ, ಕಲ್ಯಾಣ ಮಂಟಪ, ಶಾದಿ ಮಹಲಗಳನ್ನು ನಿಮರ್?ಸುವುದು, ಐತಿಹಾಸಿಕ ವಲ್ಲಭಗಡ, ಮಚ್ಚಗಡ ಕೋಟೆಗಳ ಅಭಿವೃದ್ದಿಮಾಡಿ ಪ್ರವಾಸಿ ತಾಣಗಳನ್ನು ಅಭಿವೃದ್ದಿಪಡಿಸಲಾಗುವುದು. ಕಾರಣ ಸಂಕೇಶ್ವರ–ಹುಕ್ಕೇರಿ ಭಾಗದ ಜನರು ಕಾಂಗ್ರೆಸ ಪಕ್ಷಕ್ಕೆ ಮತ ನೀಡಿ ಬೆಂಬಲಿಸಬೇಕು ಎಂದರು.

ಇನ್ನೊರ್ವ ಕಾಂಗ್ರೆಸ್ ಪಕ್ಷದ ಮುಖಂಡ, ಮಾಜಿ ಸಚಿವ ಶಶಿಕಾಂತ ನಾಯಿಕ ಅವರು ಮಾತನಾಡಿ,ತಾವು ಸಚಿವರಾಗಿದ್ದ ಕಾಲದಲ್ಲಿ ಕೊಟಬಾಗಿ ಯಾತ ನೀರಾವರಿ ಯೋಜನೆಯ ಪುನರಾರಂಭ, ಘೋಡಗೇರಿ ಬಳಿ ಸೇತುವೆ–ಕಂ–ಬಾಂದಾರ, ರುಸ್ತುಂಪುರ ಯಾತ ನೀರಾವರಿ ಯೋಜನೆಯ ಅನುಷ್ಠಾನಗೊಳಿಸಲಾಗಿದ್ದು ಇದರಿಂದ ರೈತರ ಸಾವಿರಾರು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಉಂಟಾಯಿತು ಎಂದ'ರು. ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ ಮುಖಂಡರಾದ ಸಂತೋಷ ಮುಡಸಿ, ಡಾ.ಜಯಪ್ರಕಾಶ ಕರಜಗಿ ಉಪಸ್ಥಿತರಿದ್ದರು.



## ನಮ್ಮ ನಡೆ ಮತಗಟ್ಟೆಯ ಕಡೆ ಕಾರ್ಯಕ್ರಮಕ್ಕೆ ಚಾಲನೆ

**ಮೂಡಲಗಿ:** ವಿಧಾನಸಭೆಯ ಸಾರ್ವತ್ರಿಕ 2023ರ ಚುನಾವಣೆಯಲ್ಲಿ ಮತದಾನದಲ್ಲಿ ಭಾಗವಹಿಸುವುದು ಎಲ್ಲ ಮತದಾರರ ಸಾಮಾಜಿಕ ಹೊಣೆಗಾರಿಕೆ. ಪ್ರತಿ ಮತದಾರರು ತನ್ನ ಮತದ ಮೌಲ್ಯದವನ್ನು ಅರಿತು ಪ್ರಜಾಪ್ರಭುತ್ವದ ಈ ಪವಿತ್ರ ಹಬ್ಬದಲ್ಲಿ ಪಾಲ್ಗೊಳ್ಳುವ ಮೂಲಕ ಸದೃಡ ಹಾಗೂ ಬಲಿಷ್ಟ ದೇಶ ಕಟ್ಟುವಂತಾಗಲಿ ಎಂಬುದೇ ಚುನಾವಣಾ ಆಯೋಗದ ಉದ್ದೇಶವಾಗಿದೆ ಎಂದು ಅರಭಾವಿ ಮತಕ್ಷೇತ್ರದ ಸಹಕಾಯ ಚುನಾವಣಾಧಿಕಾರಿ ಪ್ರಶಾಂತ ಚನಗೊಂಡ ಹೇಳಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ರವಿವಾರದಂದು ಜರುಗಿದ ?ನಮ್ಮ ನಡೆ ಮತಗಟ್ಟೆಯ ಕಡೆ? ಎಂಬ ಕಾರ್ಯಕ್ರಮದ ಅಂಗವಾಗಿ ಸಿಡಿಪಿಓ ಕಚೇರಿ ಎದುರಿಗೆ ಇರುವ ಧ್ವಜಸ್ತಂಭಕ್ಕೆ ಚುನಾವಣಾ ಆಯೋಗದ ಬಾವುಟವನ್ನು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಚುನಾವಣೆಯ ಮತದಾನ ಮೇ 10ರಂದು ನಡೆಯಲಿದ್ದು, ?ನಮ್ಮ ನಡೆ ಮತಗಟ್ಟೆಯ ಕಡೆ? ಕಾರ್ಯಕ್ರಮವನ್ನು ಚುನಾವಣಾ ಆಯೋಗದ ಆದೇಶದಂತೆ ಅರಭಾವಿ ಮತಕ್ಷೇತ್ರದ ಪ್ರತಿ




ಮತಗಟ್ಟೆಯನ್ನು ಮತದಾರರಿಗೆ ಪರಿಚಯಿಸುವುದು ಮತ್ತು ಪ್ರಜಾಭುತ್ವದ ಹಬ್ಬ–ಮೇ 10 ಮತದಾನ ಎಂಬ ಧ್ಯೇಯ ಒಳಗೊಂಡಿರುವ ಬಾವುಟವನ್ನು ಪ್ರತಿ ಮತಗಟ್ಟೆಯಲ್ಲಿ ಧ್ವಜಾರೋಹಣ ಮಾಡಲಾಗುತ್ತಿದ್ದು ಮತದಾರರಿಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳು, ಕಾಲ್ನಡಿಗೆ ಜಾಥಾ ಸೇರಿದಂತೆ ವೈವಿಧಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಈ ವೇಳೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಮತದಾರರಿಗೆ ಮತದಾರರ ಚೀಟಿಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಎಫ್ ಜಿ ಚಿನ್ನನವರ, ಬಿಇಒ ಅಜೀತ ಮನ್ನಿಕೇರಿ, ಸಿಡಿಪಿಒ ಯಲ್ಲಪ್ಪ ಗದಾಡಿ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಜ್ಯೋತಿ ಉಪ್ಪಾರ, ಪುರಸಭೆ ಆರೋಗ್ಯ ನೀರಿಕ್ಷಕ ಚಿದಾನಂದ ಮುಗಳಖೋಡ, ಪುರಸಭೆ ಪ್ರಥಮ ದರ್ಜೆ ಸಹಾಯಕಿ ಗೀತಾ ಬುದಿಹಾಳ, ಪುರಸಭೆ ಲೇಕ್ಕಪಾಲ ಅಧಿಕಾರಿ ರಶ್ಮಿ ಶೇರಖಾಣಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಅಂಗನವಾಡಿ ಮೇಲ್ವಿಚಾರಕಿಯರು, ಅಂಗನವಾಡಿ–ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



**ಕೊಪ್ಪಳ:** ತಾಲ್ಲೂಕಿನ ಕುಣಿಕೇರಿ ಗ್ರಾಮದ ಹೊರ ವಲಯದ ಇಂದಿರಾಗಾಂಧಿ ವಸತಿ ಶಾಲೆ ಹತ್ತಿರದಲ್ಲಿ ಶನಿವಾರ ಮಧ್ಯಾಹ್ನ ಖಾಸಗಿ ಕಾರ್ಖಾನೆಯ ಕ್ರೂಷರ್ ಪಲ್ಟಿಯಾದ ಪರಿಣಾಮ ವಾಹನದಲ್ಲಿದ್ದ ಅಂದಾಜು ಏಳರಿಂದ ಎಂಟು ಜನರ ಪೈಕಿ ಓರ್ವನ ಸ್ಥಿತಿ ಗಂಭೀರವಾಗಿದ್ದು, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾದ ಘಟನೆ ನಡೆದಿದೆ. ಗಂಭೀರ ಗಾಯವಾದ ರಮೇಶ್ ಬಂಗಾಳಿ (25) ಎಂಬಾತನನ್ನು ಕೆ.ಎಸ್. ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಆತನ ಸ್ಥಿತಿ ಗಂಭೀರವಾಗಿದ್ದು, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಚಿಕ್ಕಬಗನಾಳ ಗ್ರಾಮದಲ್ಲಿನ ಬಾಬಾ ಅಖೀಲ ಸಾಯಿ ಜ್ಯೋತಿ ಕಾರ್ಖಾನೆಯ ಕ್ರೂಷರ್ ಇದಾಗಿದ್ದು, ಎಂದಿನಂತೆ ಇಂದು ಮಧ್ಯಾಹ್ನ 2 ರ ಸುಮಾರಿಗೆ ಕಾರ್ಮಿಕರನ್ನು ಬಿಡಲು ಕೊಪ್ಪಳ ನಗರಕ್ಕೆ ಸಂಚರಿಸುತ್ತಿತ್ತು. ಇಂದು ಮಧ್ಯಾಹ್ನ ಸುಮಾರಿಗೆ ಚಾಲಕನ ನಿರ್ಲಕ್ಷ್ಯದಿಂದಾಗಿ ಈ ಅವಘಡ ಸಂಭವಿಸಿದೆ. ಈ ಕುರಿತು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕ್ಷೇತ್ರದ ಜನರು ನನಗೆ ಬೆಂಬಲ ನೀಡಿ: ಕಲ್ಲೋಳಕರ

**ಚಿಕ್ಕೋಡಿ:** ರಾಯಬಾಗ ವಿಧಾನಸಭೆ ಶಾಸಕನಾಗಿ ಆಯ್ಕೆಯಾದರೆ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಗ್ರಾಮೀಣ ಮಕ್ಕಳಿಗೆ ಐಎಎಸ್ ಕೋಚಿಂಗ ಸೆಂಟರ ಆರಂಭ ಮಾಡಿ ತರಬೇತಿ ನೀಡುವ ಸಂಕಲ್ಪ ಇಟ್ಟುಕೊಂಡಿದ್ದು, ಕ್ಷೇತ್ರದ ಜನರು ನನಗೆ ಬೆಂಬಲ ನೀಡಬೇಕೆಂದು ರಾಯಬಾಗ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ನಿವೃತ್ತ ಐಎಎಸ್ ಅಧಿಕಾರಿ ಶಂಭು ಕಲ್ಲೋಳಕರ ಹೇಳಿದರು.

ಚಿಕ್ಕೋಡಿ ತಾಲೂಕಿನ ನಾಗರಮುನ್ನೋಳ್ಳಿ ಗ್ರಾಮದಲ್ಲಿ ಪ್ರಚಾರ ಕಾರ್ಯಾಲಯ ಪೂಜೆ ನೇರವೇರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ನಾನು ಕಾಂಗ್ರೆಸ್ ಪಕ್ಷದ ಆಕಾಂಕ್ಷಿಯಾಗಿದ್ದೇ ಆದರೆ ಟಿಕೆಟ್ ನೀಡದೇ ನನಗೆ ಅನ್ಯಾಯ ಮಾಡಿದರು. ಆದರೂ ನಾನು ಕ್ಷೇತ್ರದ ಮತದಾರರ ನಿರೀಕ್ಷೆಯಂತೆ ಪಕ್ಷೇತರಾಗಿ ಸ್ಪರ್ಧೆ ಮಾಡಿದ್ದೇನೆ. ಕ್ಷೇತ್ರದಲ್ಲಿ ಜನರು ನೀಡುವ ಪ್ರೀತಿ ವಿಶ್ವಾಸ ನನಗೆ ಆನೆ ಬಲ ಬಂದಂತಾಗಿದೆ. ನಾನು ಹೋದ



ಕಡೆಗೆಲ್ಲ ಕಾರ್ಯಕರ್ತರು ಉತ್ಸಾಹದಿಂದ ನನಗೆ ಸ್ವಾಗತಿಸಿ ಪ್ರಚಾರ ಆರಂಬಿಸುತ್ತಿದ್ದಾರೆ ಎಂದರು.

ಜನರ ಸೇವೆ ಮಾಡಲು ಐಎಎಸ್ ಹುದ್ದೆ ತ್ಯೆಜಿಸಿ ಬಂದಿದ್ದೇನೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ನಾನು ಯಾವ ಇಲಾಖೆಯಲ್ಲಿ ಎಷ್ಟೇಷ್ಟು ಅನುದಾನ ದೊರೆಯುತ್ತಿದೆ ಎಂಬ ಮಾಹಿತಿ ನನ್ನಲಿದೆ. ಹೀಗಾಗಿ ಹಿಂದುಳಿದ ಕ್ಷೇತ್ರವೆಂದು ಹಣೆಪಟ್ಟಿಕಟ್ಟಿಕೊಂಡಿರುವ ರಾಯಬಾಗ ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡುವುದು ನನ್ನ ಗುರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ದುರೀಣ ಸಿದ್ದಪ್ಪ ಮರ್ಯಾಯಿ, ಧುಳಗೌಡ ಪಾಟೀಲ, ನಾನಾಗೌಡ ಪಾಟೀಲ, ಶಿವಾನಂದ ಮರ್ಯಾಯಿ, ಲಕ್ಷ್ಮೀಸಾಗರ ಈಟಿ, ಶಿವಪುತ್ರ ಮನಗೂಳಿ, ಅನಿಲ ಈಟಿ, ರವಿ ಕರೋಶಿ, ರಾಘವೇಂದ್ರ ಬಡಿಗೇರ, ಮೀರಾಸಾದ ಮುಲ್ತಾನಿ, ರಾಘವೇಂದ್ರ ಸನದಿ, ಶಂಕರ ನೇರ್ಲಿ, ಸುಭಾಷ ಕೊಟಬಾಗಿ, ಸುಭಾಷ ಈಟಿ, ತ್ಯಾಗರಾಜ ಕದಮ್, ಮಹಾದೇವ ಮುನ್ನೋಳಿಕರ ಮುಂತಾದವರು ಇದ್ದರು.

## ಮಾಜಿ ತಾಲೂಕಾ ಪಂಚಾಯಿತಿ ಸದಸ್ಯ ಸಹಿತ ನೂರಾರು ಜನರು ಬಿಜೆಪಿಗೆ ಸೇರ್ಪಡೆ

**ಚಿಕ್ಕೋಡಿ:** ನಿಪ್ಪಾಣಿ ತಾಲೂಕಿನ ನಾಗನೂರ ಗ್ರಾಮದಲ್ಲಿ ಮಾಜಿ ತಾಲೂಕಾ ಪಂಚಾಯಿತಿ ಸದಸ್ಯ ದಗಡು ಚೆಂಡಕೆ, ದಯಾನಂದ ದಾದಾ ಯುವಾ ಮಂಚ ಅಧ್ಯಕ್ಷ ದಯಾನಂದ ಕೋಗಲೆ, ವಿನೋದ ಚೌಗುಲೆ, ಮೊದಲಾದವರು ಸಹಿತ ಇತರ ಪಕ್ಷದ ನೂರಾರು ಕಾರ್ಯಕರ್ತರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡರು.

ಅವರನ್ನು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಚೇರ್ಮನ್ ಸಹಕಾರ ರತ್ನ ಚಂದ್ರಕಾಂತ ಕೋಠಿವಾಲೆ ಮಾತನಾಡಿ ?ಕ್ಷೇತ್ರದಲ್ಲಿ ರೈತರ ಹಾಗೂ ಸರ್ವಸಾಮಾನ್ಯ ಕಳಕಳಿವುಳ್ಳ ಸಚಿವೆ ಶಶಿಕಲಾ ಜೊಲ್ಲೆ ಹಾಗೂ ಸಂಸದ



ಅಣ್ಣಾಸಾಹೇಬ ಜೊಲ್ಲೆ ಬಂದ್ ಆಗುವ ಸ್ಥಿತಿಯಲ್ಲಿದ್ದ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಿ ಕಾರ್ಮಿಕರ ಬಾಳಲ್ಲಿ ನಗೆ ಬೀರಿಸಿದ್ದಾರೆ. ಪರಿಣಾಮವಾಗಿ ಎಲ್ಲರೂ ಅವರಿಗೆ ಬೆಂಬಲ ಸೂಚಿಸುತ್ತಿದ್ದಾರೆ? ಎಂದರು.

ಈ ಸಂದರ್ಭದಲ್ಲಿ ಸಚಿವೆ ಶಶಿಕಲಾ ಜೊಲ್ಲೆ ಮಾತನಾಡಿ ?ಸರ್ವಸಾಮಾನ್ಯರಿಗೆ ಸನ್ಮಾನಿಸುವ ಬಿಜೆಪಿ ಏಕಮೇವ ಪಕ್ಷವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು, ಕ್ಷೇತ್ರದಲ್ಲಿ ಅವುಗಳ ಅನುಷ್ಠಾನ, ಇವೆಲ್ಲವುಗಳನ್ನು ಮನಗಂಡು ಇತರ ಪಕ್ಷದ ಕಾರ್ಯಕರ್ತರು ಬಿಜೆಪಿ ಸೇರುತ್ತಿದ್ದಾರೆ. ಹ್ಯಾಟ್ರಿಕ್ ಸಹಿತ ಮತ್ತೊಮ್ಮೆ ಗೆಲುವು ಸಾಧಿಸಿ ನಿಮ್ಮ ಸೇವೆಗೆ ಅವಕಾಶ ಕಲ್ಪಿಸಿ? ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಕಾರ್ಖಾನೆಯ ವೈಸ್–ಚೇರ್ಮನ್ ಮಲಗೊಂಡಾ ಪಾಟೀಲ, ಸಂಚಾಲಕ ಪಪ್ಪು ಪಾಟೀಲ, ಅವಿನಾಶ ಪಾಟೀಲ, ಪ್ರೊ. ಸ್ಮಿತಾ ಪಾಟೀಲ, ಕೀರ್ತಿ ಪಾಟೀಲ, ಅಮೋಲ ಚೆಂಡಕೆ, ಪ್ರಕಾಶ ಶಿಂಧೆ, ಸಾಗರ ತೋಡಕರ, ರಾಜಶ್ರೀ ಪವಾರ, ಸುನೀತಾ ಪಾಟೀಲ, ಸವಿತಾ ಪವಾರ, ಮೊದಲಾದವರು ಉಪಸ್ಥಿತರಿದ್ದರು.

## ಕೆಆರ್‌ಪಿಪಿ ರಾಜ್ಯ ಉಪಾಧ್ಯಕ್ಷರಾಗಿ ಬಿ.ವಿ.ಶ್ರೀನಿವಾಸ ರೆಡ್ಡಿ ನೇಮಕ



ಬಳ್ಳಾರಿ:ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ರಾಜ್ಯ ಉಪಾಧ್ಯಕ್ಷರ ನ್ನಾಗಿ ಬಿ.ವಿ.ಶ್ರೀನಿವಾಸ ರೆಡ್ಡಿ ಅವರನ್ನು ನೇಮಕ ಮಾಡಿ ಪಕ್ಷದ ಸಂಸ್ಥಾಪಕ ಗಾಲಿ ಜನಾರ್ಧನರೆಡ್ಡಿ ಆದೇಶ ಹೊರಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ತಮಗಿರುವ ರಾಜಕೀಯ ಅನುಭವ ಹಾಗೂ ನಾಯಕತ್ವದ ಗುಣಗಳನ್ನು ಗುರುತಿಸಿ ಈ ಜವಾಬ್ದಾರಿಯನ್ನು ನನಗೆ ನೀಡಿದೆ,

ನನ್ನ ಮೇಲೇ ಭರವಸೆ ಇಟ್ಟು ಈ ಜವಾಬ್ದಾರಿಯನ್ನು ನನಗೆ ನೀಡಿದ್ದಕ್ಕೆ ಅವರಿಗೆ ಧನ್ಯವಾದಗಳು, ಪಕ್ಷವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ನನ್ನ ಶಕ್ತಿಯನ್ನು ಮೀರಿ ಶ್ರಮಿಸುತ್ತೇನೆ ಎಂದು ಅವರು ತಿಳಿಸಿದರು.

# ಎಸ್ಸಿ ಎಸ್ಟಿ ಸಮುದಾಯದ ಮುಖಂಡರ ಮಹತ್ವಪೂರ್ಣ ಸಭೆ

ಬೆಳಗಾವಿ: ರವಿವಾರ ಸಂಜೆ ನಗರದ ಸಿಟಿ ಕಾಂಗ್ರೆಸ್ ಕಚೇರಿಯಲ್ಲಿ ಬೆಳಗಾವಿ ನಗರದ ಎಸ್ಸಿ ಎಸ್ಟಿ ಸಮುದಾಯದ ಮುಖಂಡರ ಮಹತ್ವಪೂರ್ಣ ಸಭೆಯನ್ನು ಮಾಡಲಾಗಿದ್ದು, ಕಾಂಗ್ರೆಸ್ಸಿನ ಎಸ್ಸಿ ಘಟಕ ಈ ಸಭೆಯ ಆಯೋಜನೆ ಮಾಡಲಾಗಿತ್ತು.

ಸಧ್ಯದ 2023ರ ವಿಧಾನಸಭೆ ಚುನಾವಣೆಯ ದೃಷ್ಟಿಯಲ್ಲಿ ಇಟ್ಟುಕೊಂಡು ನಡೆದ ಈ ಸಭೆಯು, ಕಾಂಗ್ರೆಸ್ಸಿಗೆ ಎಲ್ಲಾ ಶೋಷಿತ ಸಮಾಜದವರು ಬೆಂಬಲ ನೀಡುವುದು ಹಾಗೂ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಏರ್ಪಡಿಸಿದ ಸಭೆಯು ಮಹತ್ವದ್ದಾಗಿತ್ತು.

ಈ ವೇಳೆ ಮಾತನಾಡಿದ ಸಮುದಾಯದ ಮುಖಂಡರಾದ ಬಸವರಾಜ ಅರವಳ್ಳಿ ಅವರು, ಬೆಳಗಾವಿ ಉತ್ತರ ಕ್ಷೇತ್ರಕ್ಕೆ ರಾಜು ಶೇಟ್ ಎಂಬ ಉತ್ತಮ ಅಭ್ಯರ್ಥಿಯನ್ನು ಸ್ಪರ್ಧೆಗೆ ನಿಂತಿದ್ದು, ಅವರಿಗೆ ನಮ್ಮ ಬೆಂಬಲ ನೀಡಬೇಕು ಎಂದರು.



ನಮ್ಮ ಸಮುದಾಯ ಯಾವತ್ತೂ ಹೊಸ ಪಕ್ಷದ ಬೆನ್ನು ಹತ್ತಿಲ್ಲ, ಹಳೆಯ ಪಕ್ಷವನ್ನು ಬಿಟ್ಟಿಲ್ಲ, ನಮ್ಮ ಸಮುದಾಯದ ಏಳಿಗೆ ಆಗುವದಿದ್ದರೆ ಅದು ಕಾಂಗ್ರೆಸ್ಸಿನಿಂದ ಮಾತ್ರ ಸಾಧ್ಯ ಎಂದರು.

ಇನ್ನು ನಗರ ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷರಾದ ಲತಾ ಮಾನೆ ಅವರು ಮಾತನಾಡಿ, ಕಾಂಗ್ರೆಸ್ ನೀಡಿದ ಐದು ಗ್ಯಾರೆಂಟಿ ಕಾರ್ಡಿನ ಉಪಯೋಗದ ಬಗ್ಗೆ ತಿಳಿಸಿ, ರಾಜು ಶೆಟ್ ಅವರು ಒಳ್ಳೆಯ ಅಭ್ಯರ್ಥಿ ಆಗಿದ್ದು, ಎಲ್ಲರೂ ಸೇರಿ ಅವರನ್ನು ವಿಜಯಿಯಾಗಿ ಮಾಡೋಣ ಎಂದರು.

ಇನ್ನು ಎಸ್ಟಿ ಘಟಕದ ಮುಖ್ಯಸ್ಥರಾದ ಮಹಾದೇವ ತಳವಾರ ಅವರು ಮಾತನಾಡಿ, ಬಿಜೆಪಿಯವರ ಬೆಲೆಹೆಚ್ಚಳ, ನಿರುದ್ಯೋಗ, ಖಾಸಗೀಕರಣದಿಂದ ಇಡೀ ದೇಶವನ್ನೇ ಇಂದು ಬಿಜೆಪಿಯ ಕೆಲ ಜನರು ತಮ್ಮ ಕೈವಶ ಮಾಡಿಕೊಳ್ಳುತ್ತಿದ್ದಾರೆ ಎಂದರು.

ರಾಜು ಶೆಟ್ ಅವರು ಎಷ್ಟು ಮಾನವೀಯ ಮೌಲ್ಯವುಳ್ಳ ವ್ಯಕ್ತಿ ಎಂದರೆ, ಎರಡು ಮೂರು ವರ್ಷ ಕೋವಿಡ್ ಸಮುದಾಯದಲ್ಲಿ ಯಾವುದೇ ಜಾತಿ, ಧರ್ಮ, ಭಾಷೆ ನೋಡದೆ, ಪ್ರತಿಯೊಬ್ಬ ನಾಗರಿಕರು ವೈದ್ಯಕೀಯ ಸೇವೆ ಒದಗಿಸಿದರು, ಬೆಳಗಾವಿಯಲ್ಲೇ ಅತ್ಯಧಿಕ ಆಕ್ಸಿಜನ್, ಬೆಡ್ ವ್ಯವಸ್ಥೆ ಹಾಗೂ ಕಿಟ್ಟಗಳ ವಿತರಣೆ ಮಾಡಿ, ಕಷ್ಟ ಎಂದು ಬಂದ ಯಾವುದೇ ಜನರನ್ನು ಹಾಗೇ ವಾಪಸ ಕಲಿಸಲಿಲ್ಲ..

ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ವೈದ್ಯಕೀಯ ಎಲ್ಲಾ ಕ್ಷೇತ್ರಗಳಲ್ಲಿಯೂ ಅವರ ಸಹಾಯ ಎದ್ದು ಕಾಣುತ್ತದೆ ಎಂದರು.

ಇನ್ನು ಬೆಳಗಾವಿ ಉತ್ತರ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಜು ಶೇತ್ ಅವರು ಮಾತನಾಡಿ, ನನಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದ್ದಕ್ಕೆ ಸಂತೋಷ್, ಒಂದು ದಿನ ನನಗಾಗಿ ಕಷ್ಟ ತಗೊಳಿ, ಐದು ವರ್ಷ ನಾ ನಿಮ್ಮನ್ನ ಸಂತೋಷವಾಗಿ ಇಡುವೇ, ಕಾಂಗ್ರೆಸ್ ಪಕ್ಷಕ್ಕೆ ಯಾಕೆ ಮತ ಹಾಕಬೇಕೆಂದರೆ, ಇದು ಎಲ್ಲಾ ಜಾತಿ, ಧರ್ಮ, ಭಾಷೆಯ, ಕುಲದ, ಬಡವ, ಶ್ರೀಮಂತರು ಇರುವ ಪಕ್ಷ, ಮತ್ತೆ ಬಿಜೆಪಿ ಸರ್ಕಾರದ ಆಡಳಿತದಿಂದ, ಬೆಲೆಯೇರಿಕೆಯಿಂದ ಸಾಮಾನ್ಯ ಜನರ ಜೀವನ ದುಬಾರಿಯಾಗಿದೆ, ಭ್ರಷ್ಟಾಚಾರ ನಿಮಗೆ ಗೊತ್ತು, ಕಾಂಗ್ರೆಸ್ ಪಕ್ಷ ಈಗಾಗಲೇ ಗ್ಯಾರೆಂಟಿ ಕಾರ್ಡ ನೀಡಿದೆ, ಅದು ಬರೀ ಆಶ್ವಾಸನೆ ಅಲ್ಲಾ, ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರ ನಾವು ಸೌಲಭ್ಯ ನೀಡಿ ನೀಡುತ್ತೇವೆ ಎಂದು ಸಹಿ ಮಾಡಿದ್ದಾರೆ.

ಹಿಂದೆ ನಮ್ಮ ಅಣ್ಣಾ ಅವರ ಆಡಳಿತದಲ್ಲಿ ಯಾರ್ ಕಡೆನೂ ಹಣ ಪಡೆದಿಲ್ಲ, ಮುಂದೆ ನಾನು ಆರಿಸಿ ಬಂದರೂ ಯಾರ ಕಡೆಗೂ ಒಂದು ರೂಪಾಯಿ ಪಡೆಯೊಲ್ಲ ಎಂದರು.

## ಚುನಾವಣಾ ವಿಷಯ: ರಾಯಚೂರಿನ ಎಪಿಎಂಸಿ ಯಾರ್ಡ್ ಜಲಾವೃತ



ರಾಯಚೂರು: ರಾಯಚೂರಿನ ಎಪಿಎಂಸಿ ಯಾರ್ಡ್‌ಗಳು ಜಲಾವೃತಗೊಂಡಿದ್ದು, ಭತ್ತದ ಬೆಳೆಗಾರರಿಗೆ ತೀವ್ರ ನಷ್ಟ ಉಂಟಾಗುತ್ತಿದೆ.

ಯಾರ್ಡ್ ಗಳು ಜಲಾವೃತಗೊಂಡಿರುವ ಪರಿಣಾಮ, ಭತ್ತ ಹಾಗೂ ಅಕ್ಕಿಯ ಬೆಲೆ ಕುಸಿತ ಕಾಣುತ್ತಿದ್ದು, ತಮಗೆ ನಷ್ಟ ಉಂಟುಮಾಡುತ್ತಿರುವ ಈ ಸಮಸ್ಯೆಗೆ ಶೀಘ್ರವೇ ಪರಿಹಾರ ಒದಗಿಸಬೇಕೆಂದು ಭತ್ತದ ಬೆಳೆಗಾರರು ಆಗ್ರಹಿಸಿದ್ದಾರೆ.

ರಾಜ್ಯ ಚುನಾವಣೆಗೆ ಇನ್ನು 2 ವಾರಗಳಷ್ಟೇ ಬಾಕಿ ಇದ್ದು, ಇದನ್ನು ರಾಜಕೀಯ ಪಕ್ಷಗಳು ಚುನಾವಣಾ ವಿಷಯವನ್ನಾಗಿಸಿದ್ದಾರೆ. ಅಧಿಕಾರಕ್ಕೆ ಬಂದಲ್ಲಿ ಭತ್ತದ ಬೆಳೆಗಾರರ ಈ ಸಮಸ್ಯೆಯನ್ನು ಬಗೆಹರಿಸುವುದಾಗಿ ಜೆಡಿಎಸ್, ಕಾಂಗ್ರೆಸ್ ಪಕ್ಷಗಳು ಭರವಸೆ ನೀಡಿವೆ.

ರೈತರು ಹಾಗೂ ಕಾರ್ಮಿಕರ ಪ್ರಕಾರ 10 ವರ್ಷಗಳಿಂದ ಇಲ್ಲಿ ಈ ಸಮಸ್ಯೆ ಇದ್ದು, ಈ ಹಿಂದಿನ ಸರ್ಕಾರಗಳು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ

ಅಕ್ಕಿ, ಹತ್ತಿ, ಶೇಂಗಾ ಮತ್ತು ದ್ವಿದಳ ಧಾನ್ಯಗಳು ರಾಯಚೂರಿನ ಪ್ರಮುಖ ಕೃಷಿ ಉತ್ಪನ್ನಗಳಾಗಿದ್ದು, ಕರ್ನಾಟಕ ರಾಜ್ಯ ರೈತ ಸಂಘದ (ರಾಜ್ಯದ ರೈತ ಸಂಘ) ಜಿಲ್ಲಾಧ್ಯಕ್ಷ ಲಕ್ಷ್ಮಣಗೌಡ ಅವರು ಎಪಿಎಂಸಿ ಯಾರ್ಡ್‌ಗಳಲ್ಲಿ ಅಸಮರ್ಪಕ ಯೋಜನೆ ಮತ್ತು ಮೂಲಸೌಕರ್ಯದಿಂದ ಸಮಸ್ಯೆಗೆ ಕಾರಣರಾಗಿದ್ದಾರೆ.

ಎಪಿಎಂಸಿ ಮಾರುಕಟ್ಟೆಯಲ್ಲಿ ಈ ಹಿಂದೆ ಯಾವುದೇ ಶೆಡ್ ಇರಲಿಲ್ಲ, ಅಕ್ಕಿ ಮೂಟೆಗಳು ಮಳೆಯ ನೀರಿನಲ್ಲಿ ಸಂಪೂರ್ಣವಾಗಿ ತೊಯ್ದು ಅಕ್ಕಿಯ ಗುಣಮಟ್ಟವನ್ನು ಹಾಳುಮಾಡುತ್ತದೆ. ಕಳಪೆ ಒಳಚರಂಡಿ ವ್ಯವಸ್ಥೆಯಿಂದಾಗಿ ಮಳೆ ನೀರು ನೆಲದ ಮೇಲೆ ನಿಲ್ಲುತ್ತದೆ ಎಂದು ಲಕ್ಷ್ಮಣ ಗೌಡ ತಿಳಿಸಿದ್ದಾರೆ.

# ಜಾನುವಾರುಗಳಿಗೆ ಮೇವಿನ ಕೊರತೆ ಇರುವ ವಿಜಯಪುರದಲ್ಲಿ ಕೊಲ್ಹಾರ ಕೆನೆ ಮೊಸರು ಸವಿದ ಪ್ರಧಾನಿ ಮೋದಿ

ವಿಜಯಪುರ: ಪ್ರಧಾನಿ ನರೇಂದ್ರ ಮೋದಿ ಶನಿವಾರ ಉತ್ತರ ಕರ್ನಾಟಕದ ಪ್ರಸಿದ್ಧ 'ಕೊರಟಿ–ಕೊಲ್ಹಾರ' ಕೆನೆ ಮೊಸರನ್ನು ಸವಿದಿದ್ದಾರೆ. ಇದು ಬಸವನ– ಬಾಗೇವಾಡಿ ವಿಧಾನಸಭಾ ಕ್ಷೇತ್ರದ ಕೊಲ್ಹಾರ ತಾಲೂಕಿನಿಂದ ಪೂರೈಕೆಯಾಗಿತ್ತು.

ಕೊಲ್ಹಾರ ತಾಲೂಕಿನಲ್ಲಿ ಜಾನುವಾರಗಳಿಗೆ ಮೇವಿನ ಕೊರತೆಯಿದ್ದು, ಹೈನುಗಾರರು ಎಮ್ಮೆ ಸಾಕಾಣಿಕೆ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಎಮ್ಮೆ ಹಾಲಿನಿಂದ ತಯಾರಿಸಿದ ಮತ್ತು ವಿಶೇಷವಾಗಿ ತಯಾರಿಸಿದ ಮಣ್ಣಿನ ಮಡಕೆಯಲ್ಲಿ ಘನೀಕರಿಸುವ 'ಕೊರಟಿ–ಕೊಲ್ಹಾರ ಮೊಸರು' ಕರ್ನಾಟಕದಲ್ಲಿ ತನ್ನ ವಿಶಿಷ್ಟ ರುಚಿ ಮತ್ತು ಗಟ್ಟಿಗಾಗಿ ಜನಪ್ರಿಯವಾಗಿದೆ.

ಕೊಲ್ಹಾರದಲ್ಲಿ ಈ ಮೊಸರು ಒಂದು ದಶಕದಿಂದೀಚೆಗೆ ಮಾರಾಟವಾಗುತ್ತಿದ್ದು, ಆಧುನಿಕ, ಸಂಸ್ಕರಿಸಿದ ಮೊಸರುಗಳಿಗಿಂತ ಇದು ರುಚಿಕರ ಮತ್ತು ಅಗ್ಗವಾಗಿದೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ರಾಷ್ಟ್ರೀಯ ನಾಯಕರಾದ ಬಿ ಸಿ ಖಂಡೂರಿ, ಬೂಟಾ ಸಿಂಗ್ ಮತ್ತು ಇತ್ತೀಚೆಗೆ ಜೆಪಿ ನಡ್ಡಾ ಮತ್ತು ರಾಜನಾಥ್ ಸಿಂಗ್ ಈ ಮೊಸರಿನ ರುಚಿ ನೋಡಿದ್ದಾರೆ. ಹುಬ್ಬಳ್ಳಿ–ಹುಮನಾಬಾದ್ ರಾಷ್ಟ್ರೀಯ ಹೆದ್ದಾರಿ–218 ರಲ್ಲಿ ಪ್ರವಾಸಿಗರು ಮಣ್ಣಿನ ಮಡಕೆಗಳಲ್ಲಿ ಮಾರುವ ಮನೆಯಲ್ಲಿ ತಯಾರಿಸಿದ ಮೊಸರಿನ ರುಚಿಯನ್ನು ಪಡೆಯಲು ಇಲ್ಲಿ ನಿಲ್ಲುತ್ತಾರೆ.



ಪ್ರಧಾನಿ ಅವರಿಗೆ ಉತ್ತರ ಕರ್ನಾಟಕ ಪಾಕಪದ್ಧತಿಯ ಭಾಗವಾಗಿ ನೀಡಲಾಗುವ ಕೊರಟಿ–ಕೋಲ್ಹಾರ ಮೊಸರನ್ನು ಪೂರೈಸಲು ಸ್ಥಳೀಯ ಮುಖಂಡರೊಬ್ಬರು ನನ್ನನ್ನು ಕೇಳಿದರು. ನಾನು 60 ಸಣ್ಣ ಮಣ್ಣಿನ ಮೊಸರುಗಳನ್ನು ಪೂರೈಸಿದೆ, ಅದನ್ನು ಪ್ರಧಾನ ಮಂತ್ರಿಗೆ ಬಡಿಸುವ ಮೊದಲು ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಯಿತು ಎಂದು ರಾಜಶೇಖರ್ ಮಲ್ಲಿಕಾರ್ಜುನ್ ಗುಡ್ಡದೂರ್ ಪಿಟಿಐಗೆ ತಿಳಿಸಿದರು.

ತಮ್ಮ ಅಂಗಡಿಯ ಮೊಸರಿನ ರುಚಿಂ–ಯನ್ನು ಪ್ರಧಾನಿ ಸವಿದಿರುವುದರಿಂದ ತುಂಬಾ ಸಂತೋಷವಾಗಿದೆ ಎಂದು ಗುಡ್ಡದೂರಿನ ರಾಷ್ಟ್ರೀಯ ಹೆದ್ದಾರಿ 218ರಲ್ಲಿರುವ ಅಂಗಡಿಯವರೊಬ್ಬರು ಹೇಳುತ್ತಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಮೊಸರಿಗೆ ಭಾರೀ ಬೇಡಿಕೆಯಿದೆ ಆದರೆ, ಮೇವಿನ ಕೊರತೆಯಿಂದ ಪೂರೈಕೆ ಸಾಕಷ್ಟಿಲ್ಲ ಎಂದು ಅವರು ವಿಷಾದಿಸಿದರು. ಎಮ್ಮೆ ಉತ್ತಮ ಗುಣಮಟ್ಟದ ಮತ್ತು ಹಾಲು ನೀಡಲು ಮೇವು ಮುಖ್ಯವಾಗಿದೆ. ರೈತರು ತಮ್ಮ ಎಮ್ಮೆಗಳಿಗೆ ಗುಣಮಟ್ಟದ ಮೇವು ಪಡೆಯಲು ಕಷ್ಟಪಡುತ್ತಿದ್ದಾರೆ ಮತ್ತು ಆದ್ದರಿಂದ ಹೆಚ್ಚು ಜಾನುವಾರುಗಳನ್ನು ಸಾಕುತ್ತಿಲ್ಲ ಎಂದು ಅವರು ಹೇಳಿದರು.

ಜಾನುವಾರುಗಳಿಗೆ ಮೇಯಿಸಲು ಜಾಗವಿಲ್ಲದೇ ರೈತರು ಕಬ್ಬಿನಂತಹ ವಾಣಿಜ್ಯ ಬೆಳೆಗಳನ್ನು ಮಾತ್ರ ಬೆಳೆಯುತ್ತಿದ್ದಾರೆ.

ಇದರಿಂದ ಇಲ್ಲಿ ಮೇವಿನ ಕೊರತೆ ಉಂಟಾಗಿದೆ ಎನ್ನುತ್ತಾರೆ ರೈತ ಹನುಮಂತ ನ್ಯಾಮಗೊಂಡ. ಸರಕಾರಿ ಪಶು ವೈದ್ಯಾಧಿಕಾರಿ ಎಂ.ಎನ್.ಪಾಟೀಲ ಮಾತನಾಡಿ, ಕೊಲ್ಹಾರ ಪಟ್ಟಣದಲ್ಲಿ 1,805 ಎಮ್ಮೆಗಳಿದ್ದರೆ, ಕೊಲ್ಹಾರ ತಾಲೂಕಿನಲ್ಲಿ ಸುಮಾರು 3 ಸಾವಿರ ಎಮ್ಮೆಗಳನ್ನು ಸಾಕಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಹಾಲು ಮಹಾಮಂಡಳವು (ಕೆಎಂಎಫ್) 'ಕೊಲ್ಹಾರ್ ಮೊಸರು' ಅನ್ನು ಮಾರುಕಟ್ಟೆಗೆ ತರುತ್ತಿದೆ. ಈ ಮೊಸರು ರುಚಿಯಾಗಲು ಇನ್ನೊಂದು ಕಾರಣವೆಂದರೆ ಕೊಲ್ಹಾರದ ಕುಂಬಾರ ಕುಟುಂಬಗಳು ತಯಾರಿಸಿದ ಮಣ್ಣಿನ ಮಡಕೆಗಳ ಗುಣಮಟ್ಟ. ಹಾಲಿನಿಂದ ನೀರು ಹೀರಿಕೊಂಡು ಮೊಸರಿನಲ್ಲಿ ಗಟ್ಟಿ ಉಳಿಯುವ ರೀತಿಯಲ್ಲಿ ಇದನ್ನು ಮಣ್ಣಿನಿಂದ ತಯಾರಿಸಲಾಗುತ್ತದೆ. ಹಲವಾರು ತಲೆಮಾರುಗಳಿಂದ ವಿಶೇಷ ಗುಣಮಟ್ಟದ ಮಣ್ಣಿನ ಮಡಕೆಗಳನ್ನು ತಯಾರಿಸುತ್ತಿರುವ ಹಲವಾರು ಕುಂಬಾರ ಕುಟುಂಬಗಳು ಇಲ್ಲಿವೆ. 12ನೇ ವಯಸ್ಸಿನಿಂದ ಮೊಸರಿಗಾಗಿ ಈ ಮಡಕೆಗಳನ್ನು ತಯಾರಿಸುತ್ತಿದ್ದೇನೆ.

ಈಗ ಮೊಮ್ಮಕ್ಕಳು ಈ ಸಂಪ್ರದಾಯವನ್ನು ಮುಂದುವರಿಸುತ್ತಿದ್ದಾರೆ ಎಂದು 100 ವರ್ಷದ ಬಸವ್ವ ಕುಮ್ಹಾರ್ ಹೇಳಿದರು.

ಮಣ್ಣಿನ ಮಡಕೆಗಳ ಗುಣಮಟ್ಟದಲ್ಲಿ ಇನ್ನೂ ರಾಜಿಯಾಗದಿದ್ದರೂ ಹೆಚ್ಚಾಗುತ್ತಿರುವ ಮೇವಿನ ಕೊರತೆ ನೀಗಿಸಲು ಸ್ಥಳೀಯ ನಾಯಕರು ಹಾಗೂ ಆಡಳಿತ ಮುಂದಾಗದಿದ್ದರೆ ಈ ಪುಟ್ಟ ಊರಿನಲ್ಲಿ 'ಮನೆಯಲ್ಲಿಯೇ ತಯಾರಿಸಿದ ಕೊರಟಿ–ಕೊಲ್ಹಾರ ಮೊಸರು' ವ್ಯಾಪಾರವನ್ನು ನಾಶಪಡಿಸುವ ಅಪಾಯವಿದೆ.

## ಮಾಜಿ ಶಾಸಕ ಅನಿಲ್‌ಲಾಡ್ ಭರ್ಜರಿ ಮತಯಾಚನೆ



ಬಳ್ಳಾರಿ: ಮಾಜಿ ಶಾಸಕ, ನಗರ ಕ್ಷೇತ್ರದ ಜೆಡಿ–ಎಸ್ ಅಭ್ಯರ್ಥಿ ಅನಿಲ್ ಹೆಚ್.ಲಾಡ್ ಅವರು ಬಾಪುಜಿ ನಗರದಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಪ್ರಸಕ್ತ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಆಗಲಿ, ಬಿಜೆಪಿಗೆ ಆಗಲಿ ಸ್ಪಷ್ಟ ಬಹುಮತ ಬರಲ್ಲ, ಜನಪರವಾದ, ರೈತಪರವಾದ ಜೆಡಿ–ಎಸ್ ನ್ನು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ತರಲು ಮತದಾರ ನಿರ್ಧರಿಸಿದ್ದಾನೆ.

ಇದರಿಂದ ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಗಳಾಗಲಿದ್ದಾರೆ. ಸರ್ವ ಸಮುದಾಯಕ್ಕೆ ಅನುಕೂಲವಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಿದ್ದಾರೆಂದರು.

ತಾವು ಶಾಸಕರಾಗಿದ್ದಾಗ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಮಾಡಿದ ಪ್ರಯತ್ನವನ್ನು ತಿಳಿಸಿದರು.

ಈ ಬಾರಿ ನಗರದಲ್ಲಿ ಶಾಸಕರಾಗಬೇಕೆಂದು ಬಯಸಿ ಬಂದಿರುವ ಹೊಸ ಮುಖಗಳೂ ಕೇವಲ ಹಣದಿಂದ ಜನರ ಮತವನ್ನು ಗಳಿಸಬಹುದು ಎಂದುಕೊಂಡಿದ್ದಾರೆ. ಇವರು ಸಮಾಜಕ್ಕೆ ನೀಡಿರುವ ಕೊಡುಗೆ ಏನು ಎಂದು ಪ್ರಶ್ನಿಸಿದರು.

ಕಳೆದ 20 ವರ್ಷದಿಂದ ನಾನು ಸಾರ್ವಜನಿಕ ಜೀವನದಲ್ಲಿದ್ದೇನೆ ಬಡವರ ಸಂಕಷ್ಟ ಏನೆಂದು ಗೊತ್ತಿದೆ.

ನಿಮ್ಮ ನೋವಿಗೆ ಸ್ಪಂದಿಸುವ ನನಗೆ ಮತ ನೀಡಿ. ನನ್ನ ಚಿನ್ಹೆ ಭತ್ತದ ಹುಲ್ಲಿನ ಹೊರೆ ಹೊತ್ತ ಮಹಿಳೆ ಎಂದು ತಿಳಿಸಿದರು.

ಲಾಡ್ ಅವರ ಮಾತುಗಳನ್ನು ಆಸಿದ ಜನತೆ ಕಳೆದಬಾರಿಯೂ ನಿಮಗೆ ಮತ ನೀಡಿತ್ತು ಎಂದು ಕೆಲವರು ಹೇಳಿದಾಗ. ನೀವಷ್ಟೇ ಹಾಕಿದರೆ ಸಾಲದು ಎಲ್ಲರೂ ಹಾಕಬೇಕೆಂದುಮನವಿ ಮಾಡಿದರು.ಪಕ್ಷದ ಜಿಲ್ಲಾ ಅಧ್ಯಕ್ಷ ಪಿ.ಎಸ್.ಸೋಮಲಿಂಗನಗೌಡ,ಕಿರಣ್, ಲಕ್ಷ್ಮಿದಾಸ್,ವಿಶ್ವ, ಆಪ್ತ ಸಹಾಯಕ ಗಿರಿ ಪ್ರಸಾದ್ ಮೊದಲಾದವರು ಇದ್ದರು.

## ವಾಹನ ಅಪಘಾತದಲ್ಲಿ ಕರ್ತವ್ಯ ನಿರತ ಪಿಎಸ್‌ಐ ಸಾವು



ಹುಬ್ಬಳ್ಳಿ: ಕಾರು ಬ್ರಿಡ್ಜ್‌ಗೆ ಗುದ್ದಿದ್ದ ಪರಿಣಾಮ ಕರ್ತವ್ಯ ನೀರತ ಪಿಎಸ್‌ಐ ಸಾವನ್ನಪಿದ ಘಟನೆ ಹುಬ್ಬಳ್ಳಿ ತಾಲೂಕಿನ ಕಿರೇಸೂರ ಬಳಿ ಗ್ರಾಮದ ಬಳಿ ನಡೆದಿದೆ. ಅಮ್ಮಿನಗಡ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿಎಸ್‌ಐ ಮಲ್ಲಿಕಾರ್ಜುನ ಕುಲಕರ್ಣಿ ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದಾರೆ. ನಿಯಂತ್ರಣ ತಪ್ಪಿ ಕಾರು ಬ್ರಿಡ್ಜ್‌ಗೆ ಗುದ್ದಿದ್ದ ಪರಿಣಾಮ ಅಪಘಾತ ಸಂಭವಿಸಿದ್ದು, ಕರ್ತವ್ಯ ನೀರತ ಪಿಎಸ್‌ಐ ಸ್ಥಳದಲ್ಲೇ ಸಾವನ್ನಪ್ಪಿದದ್ದಾರೆ. ಮೂಲತಃ ನವಲಗುಂದ ತಾಲೂಕಿನ ಕುಮಾರಗೊಪ್ಪ ಗ್ರಾಮದ ನಿವಾಸಿಯಾದ ಇವರು ನಿಯಂತ್ರಣ ತಪ್ಪಿದ ಕಾರಣ ಕಾರು ಬ್ರಿಡ್ಜ್‌ಗೆ ಡಿಕ್ಕಿಯಾಗಿದ್ದು, ಅಪಘಾತದ ರಭಸಕ್ಕೆ ಪಿಎಸ್‌ಐ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆಯ ಬಗ್ಗೆ ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ನವಲಗುಂದ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದಾರೆ.

## ನಾರಾ ಭರತ್ ರೆಡ್ಡಿ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ

ಬಳ್ಳಾರಿ: ಬಳ್ಳಾರಿ ನಗರ ಕಾಂಗ್ರೆಸ್ ಅಭ್ಯರ್ಥಿಯಾದ ನಾರಾ ಭರತ್ ರೆಡ್ಡಿ ಅವರ ಉಪಸ್ಥಿತಿಯಲ್ಲಿ, ಮೂರನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ ಮುಂಡ್ಲೂರು ಪ್ರಬಂಜನ್ ಕುಮಾರ್ ಅವರ ನೇತೃತ್ವದಲ್ಲಿ, ಹಾಗು ಅಸಂಘಟಿತ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷರಾದ ಅಲಿವೇಲು ಸುರೇಶ್ ಅವರ ಉಪಸ್ಥಿತಿಯಲ್ಲಿ, ಹಾಗೂ ಹಿರಿಯ ಮುಖಂಡರಾದ ಆಟೋ ಬಶೀರ್ ಅವರ ಮತ್ತು ಕಾಂಗ್ರೆಸ್ ಪಕ್ಷದ ಹಲವಾರು ಬಂಡಿ ಮೋಟ್ ಪ್ರದೇಶದ ಕಾರ್ಯಕರ್ತರ ಸಮ್ಮುಖದಲ್ಲಿ ನೂರಾರು ಜನರು ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಗೊಂಡರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ನಾರಭರತ್ ರೆಡ್ಡಿ ಅವರು ಕಾಂಗ್ರೆಸ್ನ ಉಚಿತ ಕೊಡುಗೆಗಳ ಬಗ್ಗೆ ಮತ್ತು ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳ ಬಗ್ಗೆ ವಿವರಿಸಿ ಜನರಲ್ಲಿ ಉತ್ಸಾಹವನ್ನು ತುಂಬಿದರು.


# ರಾಜ್ಯದ 50 ನಾಯಕರ ಮೇಲೆ ಲೋಕಾಯುಕ್ತ, ಐಟಿ ದಾಳಿಗೆ ಬಿಜೆಪಿ ಹುನ್ನಾರ: ಲಕ್ಷ್ಮೀ ಹೆಬ್ಬಾಳಕರ ಆರೋಪ

ಬೆಳಗಾವಿ: ಚುನಾವಣೆಗೆ ಇನ್ನೂ ಕೇವಲ 10 ದಿನ ಇರುವಾಗ ಆಡಳಿತಾರೂಢ ಬಿಜೆಪಿಯವರು ಕಾಂಗ್ರೆಸ್ ಪರ ಅಲೆ ಕಂಡು ಹತಾಶರಾಗಿ ನಾನೂ ಸೇರಿದಂತೆ ಸುಮಾರು 50 ಅಭ್ಯರ್ಥಿಗಳು ಹಾಗೂ ಅವರ ಸಂಬಂಧಿಗಳ ಮೇಲೆ ಲೋಕಾಯುಕ್ತ ಹಾಗೂ ಆದಾಯ ತೆರಿಗೆ ದಾಳಿಗಳನ್ನು ನಡೆಸಿ ಧೃತಿಗೆಡಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಬೆಳಗಾವಿ ಗ್ರಾಮಿಣ ಕ್ಷೇತ್ರದ ಶಾಸಕಿ, ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಕರ್ನಾಟಕ ರಾಜ್ಯದಲ್ಲಿ ಈ ಬಾರಿ ಎಲ್ಲಿ ನೋಡಿದರೂ, ಎಲ್ಲಿ ಕೇಳಿದರೂ ಕಾಂಗ್ರೆಸ್ ಪರ ಅಲೆ ಇರುವುದು ಜನರ ಭಾವನೆಯಿಂದ ಗೊತ್ತಾಗಿದೆ. ರಾಜ್ಯದ ಜನಸಾಮಾನ್ಯರು, ಮತದಾರರು ಈ ಬಾರಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಮನಸ್ಸು ಮಾಡಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲೂ ಉತ್ತಮ ವಾತಾವರಣವಿದೆ. ಮುಖ್ಯವಾಗಿ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಿಗೆ ಜನ ಕಾಯುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಬಿಜೆಪಿಯವರು ಇಂಥ ಮಾರ್ಗ ಹಿಡಿದಿರುವುದು ಗಮನಕ್ಕೆ ಬಂದಿದೆ" ಎಂದರು.

ಚುನಾವಣೆ ಸಮೀಪಿಸಿರುವ ಈ ಸಂದರ್ಭದಲ್ಲಿ ಒಂದೊಂದು ನಿಮಿಷವೂ ಬಹು ಮುಖ್ಯವಾಗಿರುತ್ತದೆ. ನಾವು ಯಾವುದೇ ತಪ್ಪುಗಳನ್ನು ಮಾಡಿರದಿದ್ದರೂ ಇಂಥ ಸಂದರ್ಭದಲ್ಲಿ ನಮ್ಮ ಸಮಯ ವ್ಯರ್ಥಗೊಳಿಸಲು ಬಿಜೆಪಿಯವರು ಈ ತಂತ್ರ ಮಾಡುತ್ತಿದ್ದಾರೆ. ಚುನಾವಣೆಗಳು ಎದುರಾದ ಸಂದರ್ಭದಲ್ಲಿ ಪ್ರತಿಪಕ್ಷದವರನ್ನು ಹೆದರಿಸಿ ಹಣಿಯಲು ಬಿಜೆಪಿ ಹುಡುಕಿಕೊಂಡಿರುವ ಈ ವಾಮಮಾರ್ಗ ಬಿಜೆಪಿಯವರಿಗೇ ಮುಳುವಾಗಲಿದೆ ಎಂದು ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಚುನಾವಣೆ ಪ್ರಚಾರ ಅಂತಿಮ ಹಂತದಲ್ಲಿರುವ ಈ ಸಮಯದಲ್ಲಿ ಬಿಜೆಪಿಯವರು ಇಂಥ ವಾಮಮಾರ್ಗ ಬಿಡಬೇಕು. ಬದಲಾಗಿ ಸತ್ಯ, ಧರ್ಮ, ನ್ಯಾಯದ ಮಾರ್ಗದಲ್ಲಿ ಚುನಾವಣೆ ಎದು–



ರಿಸಬೇಕು ಎಂದು ಅವರು ಕೋರಿದರು.

ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು "ನಮ್ಮ ಗೆಲುವಿಗೂ ಇದಕ್ಕೂ ಸಂಬಂಧವಿಲ್ಲ. ಇಲ್ಲಿ ಗೆಲ್ಲುವ ಕುದುರೆಯನ್ನು ಕಟ್ಟಿಹಾಕುವುದಕ್ಕಿಂತ ಕೊನೆಯ ಹಂತದಲ್ಲಿ ಜನರ ಭಾವನೆಗಳನ್ನು ಕಲಕುವ ಉದ್ದೇಶ ಹೊಂದಲಾಗಿದೆ. ಒಂದೊಮ್ಮೆ ಅವರು ಇಂಥ ತಂತ್ರ ಬಳಸುವುದೇ ಆದರೆ ನಾವೇನೂ ಮಾಡಲಿಕ್ಕೂ ಸಾಧ್ಯವಿಲ್ಲ. ಆದರೆ ಯಾವುದಕ್ಕೂ ನಿರ್ಧಾರ ತಳೆಯುವವರು ಮತದಾರರು. ನಮ್ಮ ಸಮಯ ವ್ಯಥ–ರ್ವಾಗಬಾರದು ಎಂಬುದಷ್ಟೇ ನಮ್ಮ ಕಳಕಳಿ" ಎಂದರು.

ಚುನಾವಣೆ ಸಮೀಪಿಸಿರುವ ಈ ಸಂದರ್ಭದಲ್ಲಿ ಒಂದೊಂದು ನಿಮಿಷವೂ ಬಹು ಮುಖ್ಯವಾಗಿರುತ್ತದೆ. ನಾವು ಯಾವುದೇ ತಪ್ಪುಗಳನ್ನು ಮಾಡಿರದಿದ್ದರೂ ಇಂಥ ಸಂದರ್ಭದಲ್ಲಿ ನಮ್ಮ ಸಮಯ ವ್ಯರ್ಥಗೊಳಿಸಲು ಬಿಜೆಪಿಯವರು ಈ ತಂತ್ರ ಮಾಡುತ್ತಿದ್ದಾರೆ. ಚುನಾವಣೆಗಳು ಎದುರಾದ ಸಂದರ್ಭದಲ್ಲಿ ಪ್ರತಿಪಕ್ಷದವರನ್ನು ಹೆದರಿಸಿ ಹಣಿಯಲು ಬಿಜೆಪಿ ಹುಡುಕಿಕೊಂಡಿರುವ ಈ ವಾಮಮಾರ್ಗ ಬಿಜೆಪಿಯವರಿಗೇ ಮುಳುವಾಗಲಿದೆ ಎಂದು ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಚುನಾವಣೆ ಪ್ರಚಾರ ಅಂತಿಮ ಹಂತದಲ್ಲಿರುವ ಈ ಸಮಯದಲ್ಲಿ ಬಿಜೆಪಿಯವರು ಇಂಥ ವಾಮಮಾರ್ಗ ಬಿಡಬೇಕು.

ಬದಲಾಗಿ ಸತ್ಯ, ಧರ್ಮ, ನ್ಯಾಯದ ಮಾರ್ಗದಲ್ಲಿ ಚುನಾವಣೆ ಎದುರಿಸಬೇಕು ಎಂದು ಅವರು ಕೋರಿದರು.

ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು "ನಮ್ಮ ಗೆಲುವಿಗೂ ಇದಕ್ಕೂ ಸಂಬಂಧವಿಲ್ಲ. ಇಲ್ಲಿ ಗೆಲ್ಲುವ ಕುದುರೆಯನ್ನು ಕಟ್ಟಿಹಾಕುವುದಕ್ಕಿಂತ ಕೊನೆಯ ಹಂತದಲ್ಲಿ ಜನರ ಭಾವನೆಗಳನ್ನು ಕಲಕುವ ಉದ್ದೇಶ ಹೊಂದಲಾಗಿದೆ. ಒಂದೊಮ್ಮೆ ಅವರು ಇಂಥ ತಂತ್ರ ಬಳಸುವುದೇ ಆದರೆ ನಾವೇನೂ ಮಾಡಲಿಕ್ಕೂ ಸಾಧ್ಯವಿಲ್ಲ. ಆದರೆ ಯಾವುದಕ್ಕೂ ನಿರ್ಧಾರ ತಳೆಯುವವರು ಮತದಾರರು. ನಮ್ಮ ಸಮಯ ವ್ಯಥ–ರ್ವಾಗಬಾರದು ಎಂಬುದಷ್ಟೇ ನಮ್ಮ ಕಳಕಳಿ" ಎಂದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, "ನಾವೇನೂ ತಪ್ಪು ಮಾಡಿಲ್ಲ. ಈ ದಾಳಿಗಳನ್ನು ತಡೆಯುವ ಪ್ರಯತ್ನವನ್ನೂ ಮಾಡಿಲ್ಲ. ಆದರೆ ಜನರಿಗೆ ಈ ವಿಷಯ ತಿಳಿಸುವುದು ಉದ್ದೇಶವಾಗಿದೆ. ಜನತೆ ಕೂಡ ಈ ವಾಮಮಾರ್ಗದ ತಂತ್ರ ನೋಡಿ ನಿರ್ಧಾರ ಮಾಡಬೇಕಿದೆ ಎಂದರು.

ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ಆ ಕುರಿತು ಇನ್ನೂ ನಿರ್ಧರಿಸಿಲ್ಲ. ಎಲ್ಲ ಚುನಾಯಿತ ಶಾಸಕರು ಸೇರಿ ಈ ಕುರಿತು ನಿರ್ಧಾರ ತಳೆದು ಹೈಕಮಾಂಡ್ ಗೆ ಕಳುಹಿಸುತ್ತಾರೆ. ಹೈಕಮಾಂಡ್ ನಿರ್ಧಾರದಂತೆ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆ ನಡೆಯುತ್ತದೆ. ಈ ವಿಷಯದಲ್ಲಿ ಯಾವುದೇ ಗೊಂದಲ ಬೇಡ ಎಂದರು.

# ಹಾಲುಮತ ಸಮಾಜದ ಪ್ರೀತಿ, ವಿಶ್ವಾಸಕ್ಕೆ ಎಂದಿಗೂ ಚ್ಯುತಿ ತಂದಿಲ್ಲ: ಶಾಸಕ ಬಾಲಚಂದ್ರ ಜಾರಕಿಹೊಳಿ

ಮೂಡಲಗಿ: ನನ್ನ ರಾಜಕೀಯ ಏಳ್ಗೆಯಲ್ಲಿ ಹಾಲುಮತ ಸಮಾಜದ ಪಾತ್ರ ಮಹತ್ತರವಿದ್ದು, 1992ರಿಂದ ಈ ಸಮಾಜವು ನಮ್ಮ ಕುಟುಂಬದ ಬೆಳವಣಿಗೆಗೆ ದೊಡ್ಡ ಶಕ್ತಿಯಾಗಿ ನಿಂತಿದೆ. ಹಾಲುಮತ ಸಮಾಜದವರು ಈ ಬಾರಿ ಪ್ರತಿಶತ 95ರಷ್ಟು ಮತಗಳನ್ನು ನನಗೆ ನೀಡಿದರೆ ದೊಡ್ಡ ಪ್ರಮಾಣದಲ್ಲಿ ಗೆಲುವನ್ನು ದಾಖಲಿಸಲು ಅನುಕೂಲವಾಗುತ್ತದೆ ಎಂದು ಅರಭಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಸಮಾಜ ಬಾಂಧವರಲ್ಲಿ ಕಳಕಳಿಯ ಮನವಿ ಮಾಡಿಕೊಂಡರು.

ಅವರು, ರವಿವಾರದಂದು ಪಟ್ಟಣದ ಹಂದಿಗುಂದ ಕಲ್ಯಾಣ ಮಂಟಪದಲ್ಲಿ ಹಾಲುಮತ ಸಮಾಜ ಬಾಂಧವರು ತಮ್ಮ ಬೆಂಬಲಾರ್ಥವಾಗಿ ಹಮ್ಮಿಕೊಂಡ ಸಭೆಯಲ್ಲಿ ಮಾತನಾಡಿ, ಹಾಲುಮತ ಸಮಾಜವು ನಂಬಿಕೆಯನ್ನು ಉಳಿಸಿಕೊಂಡು ಹೋಗುವಂತೆ ಮನವಿ ಮಾಡಿದರು.

1992ರಲ್ಲಿ ಪ್ರಾರಂಭಗೊಂಡ ತಮ್ಮ ಕುಟುಂಬದ ರಾಜಕೀಯದಲ್ಲಿ ಈ ಸಮಾಜವು ನಮಗೆ ನಿರೀಕ್ಷೆಗೂ ಮೀರಿ ಬೆಂಬಲ ನೀಡುತ್ತ ಬರುತ್ತಿದೆ. ನಂಬಿಕೆ ಮತ್ತು ವಿಶ್ವಾಸಕ್ಕೆ ಹೆಸರುವಾಸಿಯಾದ ಈ ಸಮಾಜವು ಪ್ರತಿಸಲ ನನಗೆ ತಮ್ಮ ಆಶೀರ್ವಾದ ಮಾಡುತ್ತ ಬರುತ್ತಿದ್ದರೂ 2018ರ ಚುನಾವಣೆಯಲ್ಲಿ ಈ ಸಮಾಜದಿಂದ ನನಗೆ ಶೇ70ರಷ್ಟು ಮತಗಳು ಬಂದಿದ್ದವು. ಈ ಬಾರಿ ಶೇ90 ರಿಂದ 95ರ ತನಕ ಮತಗಳು ಬೀಳಲು ಸಮಾಜ ಬಾಂಧವರು ಪ್ರಯತ್ನಿಸಬೇಕು. ಸಮಾಜವು ಹೆಚ್ಚಿನ ಪ್ರಮಾಣದಲ್ಲಿ ಕಾಳಜಿ ವಹಿಸಿಕೊಂಡು ಪ್ರತಿ ಬೂತ್ ಮಟ್ಟದಲ್ಲಿ ಕೆಲಸವನ್ನು ಮಾಡಬೇಕು. ಅಭಿವೃದ್ಧಿಯನ್ನು ಮಾಡುತ್ತಿರುವವರಿಗೆ ಬೆಂಬಲವನ್ನು ನೀಡುವಂತೆ ತಿಳಿಸಿದರು.

ಹಾಲುಮತ ಸಮಾಜಕ್ಕೆ ಸೇರಿರುವ ಎಲ್ಲ ಕಾರ್ಯಕರ್ತರ ಕೆಲಸಗಳನ್ನು ಪ್ರಾಮಾಣಿಕವಾಗಿ ಮಾಡಿಕೊಟ್ಟಿರುವೆ. ಪ್ರೀತಿ ವಿಶ್ವಾಸಕ್ಕೆ ಎಂದಿಗೂ ಧಕ್ಕೆ ತಂದಿಲ್ಲ. ಈ ಸಮಾಜವೂ ಸೇರಿದಂತೆ ಕ್ಷೇತ್ರದ ಎಲ್ಲ ಸಮಾಜಗಳು ಸಹ ನನ್ನನ್ನು ತಮ್ಮ ಮನೆಯ ಮಗನಂತೆ ಹರಿಸಿ ಆಶೀರ್ವಾದ ಮಾಡುತ್ತ ಬರುತ್ತಿದ್ದಾರೆ. ಈ ಸಮಾಜಕ್ಕೂ ಕೂಡ ಸಾಕಷ್ಟು ಪ್ರಾಶಸ್ತ್ಯ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಸಮಾಜದ ಬೇಡಿಕೆಯಂತೆ ಎಲ್ಲವನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ದೊಡ್ಡ ಮಟ್ಟದ ಅಧಿಕಾರವನ್ನು ನೀಡಲಿಕ್ಕೆ ಎಲ್ಲ ಹಂತದಲ್ಲಿಯೂ ಪ್ರಯತ್ನಿಸುತ್ತೇನೆ. ಸಾಮಾಜಿಕ ನ್ಯಾಯದ ತತ್ವದಡಿ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತೇನೆ ಎಂದು ಅವರು ತಿಳಿಸಿದರು.



ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದೇನೆ. ಜನರಿಗೆ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೇನೆ. ಸರಕಾರದ ಅನುದಾನ ಬಿಡುಗಡೆಯಾಗಲು ವಿಳಂಬವಾದರೆ ನಾನೇ ಸ್ವತಃ ದುಡ್ಡು ಹಾಕಿ ರಸ್ತೆಗಳನ್ನು ನಿರ್ಮಿಸಿಕೊಟ್ಟಿದ್ದೇನೆ. ರಸ್ತೆಗೆ ಒಂದು ಹಿಡಿ ಮಣ್ಣು ಹಾಕದ ಅಭ್ಯರ್ಥಿಯೊಬ್ಬರು ಐದು ವರ್ಷಕ್ಕೊಮ್ಮೆ ಬಂದು ಜನರಿಗೆ ಮುಖ ತೋರಿಸುತ್ತಾರೆ. ಅವರಿಗೆ ಮಣೆ ಹಾಕಬೇಡಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಂಕಣಬದ್ಧನಾಗಿ ದುಡಿಯುತ್ತಿರುವ ನನಗೆ ನಿಮ್ಮ ಅಮೂಲ್ಯ ಮತ ನೀಡಿ ಆಶೀರ್ವಾದ ಮಾಡಿ. ನಿಮ್ಮಗಳ ಸೇವೆಗೆ ಸದಾ ಸಿದ್ಧನಾಗಿದ್ದೇನೆ ಎಂದು ಬಿಜೆಪಿ ಅಭ್ಯರ್ಥಿ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಪ್ರದೇಶ ಕುರುಬರ ಸಂಘದ ನಿರ್ದೇಶಕ ರಾಜೇಂದ್ರ ಸಣ್ಣಕ್ಕಿ ಮಾತನಾಡಿ, ನಮ್ಮ ಸಮಾಜಕ್ಕೂ ಜಾರಕಿಹೊಳಿ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ರಾಜ್ಯದಲ್ಲಿಂದು ಜಾರಕಿಹೊಳಿ ಸಾಮ್ರಾಜ್ಯ ವಿಸ್ತರಣೆಯಾಗಿದೆ ಎಂದರೇ ಅದಕ್ಕೆ ನಮ್ಮ ಸಮಾಜವೇ ಕಾರಣವಾಗಿದೆ. ಜೊತೆಗೆ ಈ ಕುಟುಂಬವು ರಾಜಕೀಯಕ್ಕೆ ಬರಲು ಸಹ ನಾವೇ ಕಾರಣರು. ಬಾಲಚಂದ್ರ ಜಾರಕಿಹೊಳಿ ಅವರನ್ನು ಒಬ್ಬ ಕುಟುಂಬದ ಸದಸ್ಯನಂತೆ ನಾವೆಲ್ಲರೂ ಭಾವಿಸಿದ್ದೇವೆ. ಅವರು ಕೂಡ ನಮಗೆಲ್ಲ ಪಾಲಿಟಿಕಲ್ ಪಾವರ್ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ನಮ್ಮ ಸಮಾಜಕ್ಕೆ ಇನ್ನೂ ಹೆಚ್ಚಿನ ರಾಜಕೀಯ ಅಧಿಕಾರವನ್ನು ನೀಡುವಂತೆ ಆಗ್ರಹಿಸಿದರು. ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಅರವಿಂದ ದಳವಾಯಿ ಅವರ ಸಾಧನೆ ಶೂನ್ಯವಾಗಿದೆ. ನಮ್ಮ ಸಮಾಜಕ್ಕೂ ಯಾವ ಕೊಡುಗೆಯನ್ನು ಸಹ ನೀಡಿಲ್ಲ. ದಳವಾಯಿ ಅವರನ್ನು ತಿರಸ್ಕರಿಸಿ ಬಾಲಚಂದ್ರ ಜಾರಕಿಹೊಳಿ ಅವರಿಗೆ ಮತ ನೀಡಿ ಆಯ್ಕೆ ಮಾಡುವಂತೆ ಕೋರಿದರು.

ಟಿಎಪಿಸಿಎಮ್‌ಎಸ್ ಉಪಾಧ್ಯಕ್ಷ ವಿಠ್ಠಲ ಪಾಟೀಲ ಮಾತನಾಡಿ, ಅರವಿಂದ ದಳವಾಯಿ ಅವರ ಬೆಂಬಲಕ್ಕೆ ಯಾರು ನಿಲ್ಲಬಾರದು. ಎಲ್ಲರೂ ಒಮ್ಮತದಿಂದ ನಮ್ಮೆಲ್ಲರ ನೆಚ್ಚಿನ ನಾಯಕ ಬಾಲಚಂದ್ರ ಜಾರಕಿಹೊಳಿ ಅವರಿಗೆ ಮತ ನೀಡೋಣ. ಈ ಮೂಲಕ ಅವರ ಕೈಗಳನ್ನು ಬಲಪಡಿಸೋಣ. ನಮ್ಮ ಸಮಾಜಕ್ಕೆ ಬಾಲಚಂದ್ರ ಜಾರಕಿಹೊಳಿ ಅವರು ಮಾಡಿರುವ ಋಣವನ್ನು ಮತ ಹಾಕುವ ಮೂಲಕ ತೀರಿಸೋಣವೆಂದು ತಿಳಿಸಿದರು.

ವೇದಿಕೆಯಲ್ಲಿ ಕೊಲ್ಹಾಪೂರದ ಬಿಜೆಪಿ ಮುಖಂಡ ಮಹೇಶ ಜಾಧವ, ಮೂಡಲಗಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಡಾ. ಎಸ್ ಎಸ್ ಪಾಟೀಲ, ಮೂಡಲಗಿ ಪುರಸಭೆ ಅಧ್ಯಕ್ಷ ಹನಮಂತ ಗುಡ್ಲಮನಿ, ಜಿಪಂ ಮಾಜಿ ಸದಸ್ಯರಾದ ರಂಗಪ್ಪ ಇಟ್ಟನ್ನವರ, ಭೀಮಶಿ ಮಗದುಮ, ಪ್ರಭಾ ಶುರ್ಸ ನಿರ್ದೇಶಕರಾದ ಸಿದ್ದಲಿಂಗ ಕಂಬಳಿ, ಗಿರೀಶ ಹಳ್ಳೂರ, ಲಕ್ಷ್ಮಣ ಗಣಪ್ಪಗೋಳ, ತಾಪಂ ಮಾಜಿ ಸದಸ್ಯರಾದ ಲಕ್ಷ್ಮಣ ಮಸಗುಪ್ಪಿ, ನಾಗಪ್ಪ ಮಂಗಿ, ಬಿ ಬಿ ಪೂಜೇರಿ, ಮಲ್ಲಿಕಾರ್ಜುನ ವಡೇರ, ಬಸು ಕೋಣಿ, ಮುಖಂಡರಾದ ಮನು ಗಡಾದ, ರಾಮಕೃಷ್ಣ ಹೊರಟ್ಟಿ, ರಾಮಚಂದ್ರ ಪಾಟೀಲ, ಬಸವರಾಜ ಪಂಡ್ರೋಳಿ, ಸುನೀಲ ಎತ್ತಿನಮನಿ, ಮಾರುತಿ ಮರಡಿ, ವೀರಣ್ಣ ಮೋಡಿ, ಅಡಿವೆಪ್ಪ ಹಾದಿಮನಿ, ಶಿವು ಕಮತಿ, ವಿನಾಯಕ ಕಟ್ಟಿಕಾರ, ಸಂಗಪ್ಪ ಕಂಟಿಕಾರ, ಜಡೇಪ್ಪ ಮಂಗಿ ಸೇರಿದಂತೆ ಅರಭಾವಿ ಮತಕ್ಷೇತ್ರದ ಎಲ್ಲ ಸಮಾಜ ಬಾಂಧವರು ಉಪಸ್ಥಿತರಿದ್ದರು.

ಇಡೀ ಅರಭಾವಿ ಮತಕ್ಷೇತ್ರದ ಹಾಲುಮತ ಸಮಾಜ ಬಾಂಧವರು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿ ಬಿಜೆಪಿ ಅಭ್ಯರ್ಥಿ ಬಾಲಚಂದ್ರ ಜಾರಕಿಹೊಳಿ ಅವರಿಗೆ ಬೆಂಬಲ ವ್ಯಕ್ತಪಡಿಸಿದರು.

## ಏಕ್ ದೋ ತೀನ್ ಚಾರ್, ಲಕ್ಷ್ಮೀ ಅಕ್ಕ ಜೈ ಜೈ ಕಾರ್

# ಲಕ್ಷ್ಮೀ ಹೆಬ್ಬಾಳಕರ್ ಪ್ರಚಾರಕ್ಕೆ ಹೋದಲ್ಲೆಲ್ಲ ಹೂವಿನ ಮಳೆ

ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಕ್ಷೇತ್ರದ ಪ್ರತಿಯೊಂದು ಹಳ್ಳಿ ಹಳ್ಳಿಗಳಲ್ಲಿ ಚುನಾವಣೆ ಪ್ರಚಾರ ಮುಂದುವರಿಸಿದ್ದಾರೆ. ಶನಿವಾರ ಸಂಜೆ ಬಾಳೆಕುಂದ್ರಿ ಬಿಕೆಯ ಗಲ್ಲಿ ಗಲ್ಲಿಗಳಲ್ಲಿ ರೋಡ್ ಶೋ ನಡೆಸಿದರು.

ಲಕ್ಷ್ಮೀ ಹೆಬ್ಬಾಳಕರ್ ಗ್ರಾಮ ಪ್ರವೇಶಿಸುತ್ತಿದ್ದಂತೆ ಅದ್ದೂರಿ ಸ್ವಾಗತಗೈಯಲಾಯಿತು. ಜೆಸಿಬಿ ಸಹಾಯದಿಂದ ಬೃಹತ್ ಹಾರ ಹಾಕಲಾಯಿತು. ಡೊಳ್ಳು, ನಗಾರಿ ಮೂಲಕ ಮೆರವಣಿಗೆಯಲ್ಲಿ ಕರೆದೊಯ್ದರು. ಊರಿನ ಪ್ರತಿ ಗಲ್ಲಿ ಗಲ್ಲಿಗಳಲ್ಲಿ ರೋಡ್ ಶೋ ನಡೆಯಿತು. ಕಿಕ್ಕಿರಿದು ಸೇ–ರಿದ್ದ ಜನರು ಏಕ್ ದೋ ತೀನ್ ಚಾರ್, ಲಕ್ಷ್ಮೀ ಅಕ್ಕ ಜೈ ಜೈ ಕಾರ್ ಎಂದು ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಿದ್ದರು.





ಮಹಿಳೆಯರು, ವಯೋ ವೃದ್ದರೆನ್ನದೆ ಎಲ್ಲರೂ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಹೂವಿನ ಮಳೆಗರೆಯುತ್ತಿದ್ದರು. ಲಕ್ಷ್ಮೀ ಹೆಬ್ಬಾಳಕರ್ ಮಧ್ಯೆ ಮಧ್ಯೆ ವಾಹನದಿಂದ ಕೆಳಗಿಳಿದು ಹಿರಿಯರ ಪಾದಗಳಿಗೆ ನಮಸ್ಕ–ರಿಸುತ್ತಿದ್ದರು. ಕೆಲವರು ಆರತಿ ಗೈದು ಶುಭ ಹಾರೈಸಿದರೆ, ಇನ್ನು ಕೆಲವರು ಶಾಲು, ಹಾರ ಹಾಕಿ ವಿಜಯೀ ಭವ ಎಂದು ಹರಸುತ್ತಿದ್ದರು. ಕೆಲವು ಯುವಕರು ಅಂಬೇಡ್ಕರ್ ಭಾವಚಿತ್ರ ಅರ್ಪಿಸಿ, ಗೌರವಿಸಿದರು. ಮನೆ ಮನೆಗಳಲ್ಲಿ ಮನೆ ಮಗಳನ್ನು ಸಂಭ್ರಮದಿಂದ ಬರಮಾಡಿಕೊಂಡು ಅರಿಸಿನ ಕುಂಕುಮ ನೀಡಿ ಕಳಿಸುತ್ತಿದ್ದರು.

ಪಂತಬಾಳೇಕುಂದ್ರಿ ಬಿಕೆಯ ದತ್ತಮಂದಿರ ರೋಡ್, ಪಾಟೀಲ ಗಲ್ಲಿ, ಮರಾಠಾ ಗಲ್ಲಿ, ಅಂಬೇಡ್ಕರ್ ಗಲ್ಲಿ, ನಾಯಕ ಗಲ್ಲಿ, ಬಾಗವಾನ ಗಲ್ಲಿ, ಪರಮಾನಂದ ಕಾಲನಿ, ಚಾವಡಿ ಗಲ್ಲಿ, ಜನತಾ ಪ್ಲಾಟ್ ಹಾಗೂ ಪಂತ ನಗರದ ಎಲ್ಲ ಪ್ರದೇಶಗಳಲ್ಲಿ ರೋಡ್ ಶೋ ನಡೆಯಿತು.

ಈ ವೇಳೆ ಮಾತನಾಡಿದ ಲಕ್ಷ್ಮೀ ಹೆಬ್ಬಾಳಕರ್, ಕಳೆದ 5 ವರ್ಷ ನಾನು ಯಾವ ರೀತಿಯಲ್ಲಿ ಕೆಲಸ ಮಾಡಿದ್ದೇನೆ ಎನ್ನುವುದನ್ನು ನೀವೇ ನೋಡಿದ್ದೀರಿ.

ಕಷ್ಟವಿರಲಿ, ಸುಖವಿರಲಿ, ಪ್ರತಿಯೊಂದು ಸಂದರ್ಭದಲ್ಲಿ ನಿಮ್ಮೊಂದಿಗೆ ನಿಂತಿದ್ದೇನೆ. ನೀವೂ ನನಗೆ ನಿರೀಕ್ಷೆಗೂ ಮೀರಿ ಸಹಕಾರ ಕೊಟ್ಟಿದ್ದೀರಿ. ಈಗ ಚುನಾವಣೆ ಬಂದಿದೆ. ಮತ್ತೊಮ್ಮೆ ನಿಮಮ್ಮ ಸೇವೆಗೆ ಅವಕಾಶ ಮಾಡಿಕೊಡಿ. ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಕಾಲೇಜು, ಆಸ್ಪತ್ರೆ, ಬೃಹತ್ ಕೈಗಾರಿಕೆಗಳನ್ನು ತರುವ ಉದ್ದೇಶ ಇದೆ. ಕ್ಷೇತ್ರದಲ್ಲೇ ಉನ್ನತ ಶಿಕ್ಷಣ, ಆರೋಗ್ಯ ಸೇವೆ ಒದಗಿಸುವ ಜೊತೆಗೆ ನಿಮ್ಮ ಮನೆಯ ಮಕ್ಕಳಿಗೆ ಕೈಗೆ ಕೆಲಸ ಕೊಡುವಂತಹ ಯೋಜನೆಗಳನ್ನು ತರುತ್ತೇನೆ ಎಂದು ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಸ್ಥಳೀಯ ಮುಖಂಡರಾದ ಮೈನುದ್ದೀನ್ ಅಗಸಿಮನಿ, ಗುಲಾಬಿ ಅಶೋಕ ಕೋಲ್ಕಾರ್, ಅಪ್ಸರ್ಜಮಾದಾರ, ಮೊಹ್ಮದ್ ಜಮಾದಾರ, ಹೊನಗೌಡ ಪಾಟೀಲ, ಮಲ್ಲಿಕ್ ಮನಿಯಾರ್ ಸೇರಿದಂತೆ ಸಾವಿರಾರು ಜನರು ಉಪಸ್ಥಿತ–ರಿದ್ದರು.

# ಮತದಾನ ಜಾಗೃತಿ: ಬೀದಿ ನಾಟಕ ಪ್ರದರ್ಶನ



ಬೆಳಗಾವಿ: ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕಾ ಸ್ವೀಪ್ ಸಮಿತಿ ಹಾಗೂ ಗ್ರಾಮ ಪಂಚಾಯತಿ ವತಿಯಿಂದ ರವಿವಾರ ಏಪ್ರಿಲ್.30 ರಂದು ಕಂಗ್ರಾಳಿ ಬಿ.ಕೆ ಗ್ರಾಮದ ಚಾವಟ ವೃತದಲ್ಲಿ ಕಾಲ್ನಡಿಗೆ ಮತದಾನ ಜಾಗೃತಿ ಮತ್ತು ಬೀದಿ ನಾಟಕಕ್ಕೆ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಬಂಗಾರೆಪ್ಪನವರ ಅವರು ಚಾಲನೆ ನೀಡಿದರು.

ಗ್ರಾಮದ ಚಾವಟ ವೃತ್ತದಿಂದ ಸರ್ಕಾರಿ ಹಿರಿಯ ಪ್ರಾಥಮೀಕ ಶಾಲೆವರೆಗೆ ಮತದಾನ ಜಾಗೃತಿ ಜಾಥಾ ಕಾರ್ಯಕ್ರವನ್ನು ಹಮ್ಮಿಕೊಳ್ಳಲಾಯಿತು. ನಂತರ ಶಾಲೆಯ ಆವರಣದಲ್ಲಿ ಚುನಾವಣೆಯ ಕುರಿತು ಬೀದಿ ನಾಟಕ ಪ್ರದರ್ಶನ ಮಾಡಲಾಯಿತು.

ಪ್ರಜಾಪ್ರಭುತ್ವ ಹಬ್ಬ ಮೇ.10 ಮತದಾನ ಎಂಬ ದ್ಯೆಯ ವಾಕ್ಯವಳಗೊಂಡಿರುವ ದ್ವಜಾರೋಹಣ ಮಾಡಲಾಯಿತು. ನಮ್ಮ ನಡೆ ಮತಕಟ್ಟೆಯ ಕಡೆಗೆ. ಪ್ರತಿ ಮತಗಟ್ಟೆಯನ್ನು ಸಾರ್ಜನಿಕರಿಗೆ ಪರಿಚಯಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಜೇಶ ದಾನವಾಡಕರ್, ಸಹಾಯಕ ನಿರ್ದೆಶಕರಾದ (ಪ.ರಾ) ಗಣೇಶ ಕೆ.ಎಸ್., ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜಿ.ಐ.ಬರಗಿ ಜಿಲ್ಲಾ ಐಇಸಿ ಸಂಯೋಜ–ಕ ಪ್ರಮೋದ ಗೋಡೆಕರ್, ಜಿಲ್ಲಾ ಎಸ್.ಬಿ.ಎಂ ಸಮಾಲೋಚಕ ಬಾಹುಬಲಿ ಮೆಳವಂಕಿ, ತಾಂತ್ರಿಕ ಸಂಯೋಜಕ ನಾಗರಾಜ ಯರಗುದ್ದಿ, ತಾಲ್ಲೂಕು ಐಇಸಿ ಸಂಯೋಜಕ ರಮೇಶ ಮಾದರ, ತಾಂತ್ರಿಕ ಸಹಾಯಕರು ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿಗಳು ಇದ್ದರು.

# ಸಂಜೀವಿನಿ ಫೌಂಡೆಶನ್ ವೃದ್ಧಾಶ್ರಮಕ್ಕೆ ದೇಣಿಗೆ

ಬೆಳಗಾವಿ : ಬೆಳಗಾವಿಯ ಪ್ರಯತ್ನ ಸಂಘಟನೆಯರು ಆದರ್ಶ ನಗರಲ್ಲಿರುವ ಸಂಜೀವಿನಿ ಫೌಂಡೆಶನ್ ವೃದ್ಧಾಶ್ರಮಕ್ಕೆ ಕೈಲಾದ ಸಹಾಯ ಮಾಡಲೆಂದು ಹೋಗಿದ್ದರು . ಈ ವೃದ್ಧಾಶ್ರಮದಲ್ಲಿ ಸುಮಾರು ನಲ್ವತ್ತೆರಡು ವೃದ್ಧಜನರು ಇರುತ್ತಾರೆ. ಡಾ. ಸವಿತಾ ಅವರು ಈ ಫೌಂಡೇಶನ್ ಮೂರು ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಹೆಚ್ಚಾಗಿ ಆನುವಂಶಿಕ ಸಮಸ್ಯೆ ಅಲ್ಲದೇ ಕ್ಯಾನ್ಸರ್ ರೋಗಿಗಳು ಮತ್ತು ಅತಿ ವೃದ್ಧಾಪ್ಯದ ಸಮಸ್ಯೆ ಇರುವವರು ಇಲ್ಲಿದ್ದಾರೆ. ಡಾ, ಸವಿತಾ ಅವರು ಎಲ್ಲರನ್ನೂ ಅತ್ಯಂತ ಕಾಳಜಿ, ಅಂತಃಕರಣದಿಂದ ನೋಡಿಕೊಳ್ಳುತ್ತಾರೆ.



ಡಾ. ಸವಿತಾ ಅವರು, ಮುಂಬರುವ ದಿನಗಳಲ್ಲಿ ಇನ್ನೂ ಕೆಲವು ಮಾನಸೋಪಚಾರ ಸಂವಹನ ಹೀಗೆ ಯೋಜನೆಗಳನ್ನು ಕೈಗೊಳ್ಳುವ ವಿಚಾರವನ್ನು ವ್ಯಕ್ತಪಡಿಸಿದರು. ಅನೇಕ ತರಹದ ಬೇಸಿಗೆ ಶಿಬಿರಗಳನ್ನೂ ಇವರು ಏರ್ಪಡಿಸಿರುತ್ತಿದ್ದು ಈ ಸಂದರ್ಭದಲ್ಲಿ ಅವರು ಮಾಡಿದ ವಿವಿಧ ಮಣ್ಣಿನ ಕಲಾಕೃತಿಗಳನ್ನು ಪ್ರಯತ್ನ ಸಂಘಟನೆಯವರಿಗೆ ತೋರಿಸಿದರು.

ಪ್ರಯತ್ನ ಸಂಘಟನೆಯವರು ರೂ. 20,000 ಬೆಲೆಯ ಕುರ್ಚಿಗಳು ಮತ್ತು ಧಾನ್ಯವನ್ನು ದೇಣಿಗೆ ರೂಪದಲ್ಲಿ ನೀಡದರು. ಅಲ್ಲಿಯ ವೃದ್ಧರಿಗೆ ತಂಪು ಪಾನೀಯ ಮತ್ತು ಬಿಸ್ಕತ್ ಹಂಚಿದರು. ಸಂಘಟನೆಯ ಸದಸ್ಯೆಯರಾದ ಶಾಂತ ಆಚ–ಾರ್ಯ, ವೀಣಾ, ಸಂಗೀತ, ಹೇಮಾ, ಶ್ವೇತ, ಸುನೀತಾ, ಗೌರಿ, ಹಾಗೂ ಆರತಿ ಉಪಸ್ಥಿತರಿದ್ದರು.

# ನೈತಿಕ ಮತದಾನ ಮಾಡಿ: ಹರೀಶ ಬಿಕೆ



ಬೆಳಗಾವಿ: ಆಸೆ ಆಮಿಷಗಳಿಗೆ ಬಲಿಯಾಗದೇ ನೈತಿಕ ಮತದಾನ ಮಾಡುವಂತೆ ಕಾಗವಾಡ ಚುನಾವಣಾ ಅಧಿಕಾರಿ ಹರೀಶ ಬಿಕೆ ಹೇಳಿದರು.

ಕಾಗವಾಡ ಪಟ್ಟಣ ಪಂಚಾಯತ ಕಚೇರಿ ಆವರಣದಲ್ಲಿ "ನಮ್ಮ ನಡೆ ಮತಗಟ್ಟೆ ಕಡೆ" ಪ್ರಜಾಪ್ರಭುತ್ವ ಹಬ್ಬ ಅಭಿಯಾನ ಹಿನ್ನೆಲೆಯಲ್ಲಿ ರವಿವಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ತಹಶೀಲ್ದಾರ್ ಎಂ ಎನ್ ಬಳಿಗಾರ ಮಾತನಾಡಿ, ಪ್ರತಿಯೊಬ್ಬ ಯುವ ಮತದಾರರು ಕೂಡ ಕಡ್ಡಾಯವಾಗಿ ಮೇ 10 ರಂದು ಮತದಾನ ಮಾಡಬೇಕು. ಈ ಬಾರಿ ಮತದಾನದ ವೇಳೆ ವಿಶೇಷ ಚೇತನರು, ವೃದ್ದರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಬಳಿಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಮತದಾನದ ಕುರಿತು ಅರಿವು ಮೂಡಿಸಲಾಯಿತು.

ಅಲ್ಲದೇ ಜುಗೂಳ, ಮಂಗಸೂಳಿ, ಮೋಳೆ,ಉಗಾರ ಬಿಕೆ, ಕುಸನಾಳ ಸೇರಿದಂತೆ ಕಾಗವಾಡ ಮತಕ್ಷೇತ್ರ ವ್ಯಾಪ್ತಿಯ ಪ್ರತಿ ಮತಗಟ್ಟೆ ಆವರಣದಲ್ಲಿಯೂ ಕೂಡ ಧ್ವಜಾರೋಹಣ ನೆರವೇರಿಸಲಾಯಿತು.

ತಾಪಂ ಸಹಾಯಕ ನಿರ್ದೇಶಕರಾದ ಗೋಪಾಲ ಮಾಳಿ, ವೈ ಪಿ ಬೋಳಶೆಟ್ಟಿ, ಆದಿನಾಥ ಚೌಗಲೇ, ಸತೀಶ, ಬಿಎಲ್ ಒ, ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಆಶಾ, ಅಂಗವಾಡಿ ಕಾರ್ಯಕರ್ತರು ಭಾಗಿಯಾಗಿದ್ದರು.

# ಕಾಲ್ನಡಿಗೆ ಮೂಲಕ ಮತದಾನ ಜಾಗೃತಿ



ಬೆಳಗಾವಿ: ಜಿಲ್ಲಾ ಸ್ವೀಪ್ ಸಮಿತಿ, ತಾಲ್ಲೂಕಾ ಸ್ವೀಪ್ ಸಮಿತಿ ಹಾಗೂ ಗ್ರಾಮ ಪಂಚಾಯತಿ ವತಿಯಿಂದ ಶನಿವಾರ ಬಸ್ತವಾಡ ಗ್ರಾಮ ಪಂಚಾಯತ ಆವರಣದಲ್ಲಿ ಕಾಲ್ನನಡಿಗೆ ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಹರ್ಷಲ್ ಭೊಯರ್ ಅವರು ಚಾಲನೆ ನೀಡಿದರು.

ಕರ್ನಾಟಕ ಚುನಾವಣಾ ಆಯೋಗ ನಿರ್ದೇಶನದಂತೆ ಏಪ್ರಿಲ್ 29 ರಂದು ಸಾರ್ವಜನಿಕ–ರಿಗೆ ಮತಚಲಾವಣೆ ಪೂರ್ವದಲ್ಲಿ ಮತಗಟ್ಟೆಗಳ ವಿಕ್ಷಣೆ ಮತ್ತು ಮತಗಟ್ಟೆಗಳ ಮಾಹಿತಿ ನೀಡುವ ಕುರಿತು ವಿಶೇಷ ಕಾರ್ಯಕ್ರಮ ಆಯೋಜಿಸಲಾಯಿತು.

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಹರ್ಷಲ್ ಭೊಯರ್ ಅವರು ನರೇಗಾ ಕೂಲಿ ಕಾರ್ಮಿಕರೊಂದಿಗೆ ಸಂವಾಹದ ನಡೆಸಿ ಮಾತನಾಡಿದ ಅವರು : ಗ್ರಾಮದ ಸಾರ್ವಜನಿಕರು ಮತ್ತು ನರೇಗಾ ಕಾಯಕ ಬಂದು, ಕೂಲಿ ಕಾರ್ಮಿಕರು ಎಲ್ಲರೂ ತಪ್ಪದೇ ಮೇ 10 ರಂದು ಮತದಾನ ಮಾಡಬೇಕು ಎಂದು ಹೇಳಿದರು.

ಪ್ರತಿ ವರ್ಷವು ಬೆಳಗಾವಿ ತಾಲ್ಲೂಕಿನಲ್ಲಿ ನರೇಗಾ ಕಾಮಗಾರಿ ಕೆಲಸಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಕಾರ್ಮಿಕರು ಭಾಗವಹಿಸುತ್ತಿದ್ದು, ಪ್ರಸಕ್ತ ಸಾಲಿನ ನರೇಗಾ ಕಾಮಗಾರಿಯಲ್ಲಿ ಭಾಗವಹಿಸಿ ನರೇಗಾ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಬಂಗಾರೆಪ್ಪನವರ, ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಜೇಶ ದಾನವಾಡಕರ್, ಗ್ರಾಮ ಪಂಚಾಯತಿ ಅ ಭಿವೃದ್ಧಿ ಅಧಿಕಾರಿ ಶ್ರೀಮತಿ ಶ್ವೇತಾ ಡಿ.ಆರ್ , ಜಿಲ್ಲಾ ಐಇಸಿ ಸಂಯೋಜ–ಕ ಪ್ರಮೋದ ಗೋಡೆಕರ್, ಜಿಲ್ಲಾ ಎಸ್.ಬಿ.ಎಂ ಸಮಾಲೋಚಕ ಬಾಹುಬಲಿ ಮೆಳವಂಕಿ, ತಾಲ್ಲೂಕು ಐಇಸಿ ಸಂಯೋಜಕ ರಮೇಶ ಮಾದರ, ತಾಂತ್ರಿಕ ಸಹಾಯಕಿ ಶ್ರೀಮತಿ ಜ್ಯೋತಿ ಯರಗುದ್ದಿ, ಗ್ರಾಮ ಪಂಚಾಯತ ಸಿಬ್ಬಂದಿಗಳು ಇದ್ದರು.

# ಪ್ರಜಾಪ್ರಭುತ್ವದ ಹಬ್ಬ : "ಮತದಾರರ ನಡೆ ಮತಗಟ್ಟೆ ಕಡೆ"



ಬೆಳಗಾವಿ: ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ತಾಲೂಕಾ ಸ್ವೀಪ್ ಸಮೀತಿ ಹಾಗೂ ತಾಲೂಕಾ ಆಡಳಿತದ ವತಿಯಿಂದ ನಗರದ ಕ್ಷೇತ್ರ ಸಮನ್ವಾಯಾಧಿಕಾರಿಗಳ ಕಾರ್ಯಲಯದ ಮತಗಟ್ಟೆ ಸಂಖ್ಯೆ 71 ರ "ಸಖಿ ಮತಗಟ್ಟೆ" ಯಲ್ಲಿ 10–ಮೇ ಪ್ರಜಾಪ್ರಭುತ್ವದ ಹಬ್ಬವನ್ನು ಮತದಾರರ ನಡೆ ಮತಗಟ್ಟೆಯ ಕಡೆ ಯ ಕಾರ್ಯಕ್ರಮದಡಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಎಪೀಲ್ .30 2023 ರಂದು ಮುಂಜಾನೆ 8 ಗಂಟೆಗೆ ತಾಲೂಕಾ ಸ್ವೀಪ್ ಅಧ್ಯಕ್ಷರು ಹಾಗೂ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ತಾಲೂಕಾ ಸ್ವೀಪ್ ಸಮೀತಿ ಅಧ್ಯಕ್ಷರಾದ ಶ್ರೀ ಸುಭಾಷ್ ಎಸ್ ಸಂಪಗಾಂವಿ ರವರು ಧ್ವಜಾರೋಹಣವನ್ನು ನೇರವೆರಿಸಿದರು. 16–ಬೈಲಹೊಂಗಲ ಮತಕ್ಷೇತ್ರದ ಎಲ್ಲಾ ಮತಗಟ್ಟೆಯಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಪ್ರಜಾಪ್ರಭುತ್ವದ ಹಬ್ಬದಂತೆ ಆಚರಣೆ ಮಾಡಲಾಗಿದೆ ಅದರಂತೆ ಎಲ್ಲಾ ಮತದಾರ ಭಾಂದವರು ತಪ್ಪದೇ ಮತದಾನ ದಿನ ಮೇ–10 ರಂದು ಮತಗಟ್ಟೆಗೆ ಹೋಗಿ ತಮ್ಮ ಅಮೂಲ್ಯವಾದ ಮತವನ್ನು ಚಾಲಾಯಿಸುವ ಮೂಲಕ ಪ್ರಜಾಪ್ರಭುತ್ವದ ಹಕ್ಕು ಮತ್ತು ಕರ್ತವ್ಯವನ್ನು ನಿಭಾಯಿಸುಂತೆ ಕರೆ ನೀಡಿದರು.

ತದನಂತರ, ಧ್ವಜಾರೋಹಣ ನೇರವೆರಿಸಿ ತಾಲೂಕಾ ಪಂಚಾಯತ ಬೈಲಹೊಂಗಲದವರೆಗೆ ಕಾಲು ನಡೆಗೆ ಜಾಥಾ ಹಾಗೊ ಘೋಷವಾಕ್ಯಗಳನ್ನು ಕುಗುತ್ತಾ ಮತ್ತು ಮುದ್ದು ವಿದ್ಯಾರ್ಥಿಗಳಿಂದ ಭರತ್ಯನಾಟ್ಯ ವನ್ನು ಮಾಡುವ ಮೂಲಕ ಹಾಗೂ ರೈತಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೇರಗನ್ನು ತರಲಾಯಿತು.

ತಾಲೂಕಾ ಸಹಾಯಕ ಚುನಾವಣಾಧಿಕಾರಿ ಸಂಗಮೇಶ ಮೇಳ್ಳಿಗೇರಿ, ವಿರೇಶ ಹಸಬಿ ಪುರಸಭೆ ಮುಖ್ಯಾಧಿಕಾರಿ, ಎಸ್ ಎಸ್ ಸಿದ್ಧಣ್ಣವರ ತಾಲೂಕಾ ಆರೋಗಾಧಿಕಾರಿ, ವಿಜಯ ಪಾಟೀಲ, ಕಮಲಾ ಬಸರಗಿ,ಬಿ ಎನ್ ಕಸಾಳೆ, ಎಸ್ ಎಸ್ ಅರಳಿಕಟ್ಟಿ, ಎಮ್ ಎ ಇಂಚಲಮಠ, ಮೇಳಂಕಿ, ಪೆಂಡಾರಿ, ತಾಲೂಕಿನ ಬಿ.ಆರ್ ಪಿ. ಮತ್ತು ಸಿ ಆರ್ ಪಿ ಗಳು ಐ.ಇ.ಆರ್ ಟಿ ಗಳು, ಬಿ ಎಲ್ ಓ ಗಳು ಆಶಾ/ ಅಂಗನವಾಡಿ ಪುರಸಭೆ ಸಿಬ್ಬಂದಿಗಳು ಹಾಗೂ ಭರತನಾಟ್ಯ ವಿದ್ಯಾರ್ಥಿಗಳು ಲಕ್ಷ್ಮೀ ಹಿರೇಮಠ, ಅನನ್ಯಾ ಶೇಟ್ಟಿ, ಆರಾಧ್ಯ, ಯಶಸ್ವಿನಿ, ರೈತ ಗೀತೆ ಕುಮಾರ ಕಡೆಮನಿ, ನಿರೂಪಣೆ, ಎಸ್ ಬಿ ಸಂಗನಗೌಡರ ಪ್ರತಿಜ್ಞಾ ವಿಧಿ ಎಸ್ ವ್ಹಿ ಹಿರೇಮಠ ಸ್ವಾಗತ ಬಿ ಕೆ ಹರಿಜನ ವಂದನಾರ್ಪಣೆ ಅಜ್ಜಪ್ಪ ಅಂಗಡಿ ನೆರೆವರೆಸಿದರು.

# ಮಕ್ಕಳಿಗೆ ನೀಡುವ ಮೊಟ್ಟೆಯಲ್ಲೂ ಬಿಜೆಪಿ ಮೋಸ

ಖಾನಾಪುರ: ಸದಾ ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿಜೆಪಿ ಸರ್ಕಾರ ಮಕ್ಕಳಿಗೆ ನೀಡುವ ಮೊಟ್ಟೆಯಲ್ಲೂ ಮೋಸ ಮಾಡೋದು ಬಿಟ್ಟಿಲ್ಲ. ಕೋವಿಡ್ ಸಮಯದಿಂದಲೂ ಇವರ ಭ್ರಷ್ಟಾಚಾರ ಕಡಿಮೆಯಾಗಿಲ್ಲ.

ಗುತ್ತಿಗೆದಾರರ ಸಂಘದವರು ಪತ್ರ ಬರೆದರೂ ಪ್ರಧಾನಿ ಮೋದಿಯಿಂದ ಉತ್ತರ ಬರಲಿಲ್ಲ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಬಿಜೆಪಿ ವಿರುದ್ಧ ಕಿಡಿ ಕಾರಿದ್ದಾರೆ.



ಖಾನಾಪುರ ಪಟ್ಟಣದ ಮಲಪ್ರಭ ಕ್ರೀಡಾಂಗಣದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಮ್ಮಿಕೊಂಡಿದ್ದ ಖಾನಾಪುರ ವಿಧಾನಸಭಾ ಮತಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಮೊಟ್ಟೆಯಲ್ಲೂ ಮೋಸ ಮಾಡೋದು ಬಿಟ್ಟಿಲ್ಲ ಎಂದು ಲೇವಡಿ ಮಾಡಿದ್ದಾರೆ.

ಮುಂದುವರಿದು, ಕರ್ನಾಟಕದಲ್ಲಿ ಅರಣ್ಯ ಸಂಪತ್ತು, ಖನಿಜ ಸಂಪತ್ತು ಎಲ್ಲವೂ ಇದೆ. ಇಲ್ಲಿನ ಯುವಕರು ಶಿಕ್ಷಿತರಿದ್ದು ಅವರ ಭವಿಷ್ಯ ಉತ್ತಮವಾಗಿದೆ.

ಇಡೀ ವಿಶ್ವದಲ್ಲೇ ಬೆಂಗಳೂರು ಸುಪ್ರಸಿದ್ಧವಾಗಿದೆ, ತಂತ್ರಜ್ಞಾನಕ್ಕೆ ಹೆಸರುವಾಸಿಯಾಗಿದೆ.

ನಾನು ವಿದೇಶಕ್ಕೆ ಹೋದಾಗ ಕರ್ನಾಟಕದ ಯುವಕರು ಐಟಿಯಲ್ಲಿ ಕೆಲಸ ಮಾಡುವವರು ಸಿಕ್ಕಾಗ ಗರ್ವವಾಗುತ್ತೆ. ಆದ್ರೆ ಕರ್ನಾಟಕದಲ್ಲಿರುವ ಸರ್ಕಾರಕ್ಕೆ ಇದರ ಬಗ್ಗೆ ಗೊತ್ತಿಲ್ಲ ಎಂದು ಟೀಕಿಸಿದ್ದಾರೆ.

# ಬಿಜೆಪಿ ಅಭ್ಯರ್ಥಿ ವಿಠಲ ಹಲಗೇಕರ್ ಭರ್ಜರಿ ಮತ ಭೇಟಿ



ಬೆಳಗಾವಿ : ಖಾನಾಪುರ್ ಮತಕ್ಷೇತ್ರದ ಅಧಿಕೃತ ಬಿಜೆಪಿ ಅಭ್ಯರ್ಥಿ ವಿಠ್ಠಲ್ ಹಾಲಿಗೆಕರ್ ವಿವಿಧ ಗ್ರಾಮಗಳಾದ ಚೋರ್ಲಾ, ಚಿಗುಳೆ, ಮನ್, ಕಣಕುಂಬಿ, , ಪರ್ವಾಡ, ಗವಳಿವಾಡೆ, ಬೆಟ್ನೆ, ಚಿಖಲೆ, ಗಾವಸೆ, ಆಮ್ಟೆ, ಕಲಮನಿ ಗ್ರಾಮಗಳಿಗೆ ಬಿಜೆಪಿ ಅಭ್ಯರ್ಥಿ ವಿಠ್ಠಲ್ ಹಾಲ್ಗೇಕರ ಪ್ರಚಾರ ಸಭೆ ನಡೆಸಿ ಭರ್ಜರಿ ಮತಯಾಚನೆ ನಡೆಸಿದರು.

ಅವರಿಗೆ ಸಾತ್ ನೀಡಿದ ಖಾನಾಪುರ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಒಳ್ಳೆಯ ಒಡನಾಟ ಇಟ್ಟುಕೊಂಡಿರುವ ಧನ್ಯಶ್ರೀ ಸರದೇಸಾಯಿ ಹಾಗೂ ಮಾಜಿ ಶಾಸಕ ಅರವಿಂದ್ ಪಾಟೀಲ್ ಜೊತೆಗೂಡಿ ಮತದಾರರ ಸಭೆಗಳನ್ನು ನಡೆಸಿ ಭರ್ಜರಿ ಮತ ಬೇಟೆ ಮಾಡಿದರು ಈ ಸಮಯದಲ್ಲಿ ಖಾನಾಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಮುಖಂಡರುಗಳು ಸಾತ್ ನೀಡಿದರು.

# ಕಾಂಗ್ರೆಸ್ ಪ್ರಚಾರ ಸಮಿತಿಗೆ ಜಂಟಿ ಸಂಯೋಜಕರ ನೇಮಕ



ಬಳ್ಳಾರಿ: ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಬಳ್ಳಾರಿ ಗ್ರಾಮೀಣ ವಿಧಾನಸಭಾ ಜಿಲ್ಲಾ ಜಂಟಿ ಸಂಯೋಜಕರನ್ನಾಗಿ ಹಲವರನ್ನು ನೇಮಕ ಮಾಡಿರುವ ಕೆಪಿಸಿಸಿ ರಾಜ್ಯ ಪ್ರಚಾರ ಸಮಿತಿಯ ಸಂಯೋಜಕ ಅಲ್ಲಂ ಪ್ರಶಾಂತ್ ಅವರು ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರೊಂದಿಗೆ ಭಾನುವಾರ ನೇಮಕಾತಿ ಆದೇಶದ ಪ್ರತಿಗಳನ್ನು ವಿತ–ರಿಸಿದರು. ಪಿ.ಜಗನ್ನಾಥ, ಪ್ರಭುಸ್ವಾಮಿ, ಕೆ.ಮಲ್ಲಿಕಾರ್ಜುನ, ಜೆ.ರಾಜಶೇಖರ, ಸತೀಶ್ ಚಕ್ರವರ್ತಿ, ಚಂಪ್ ಚವ್ಹಾಣ್, ಗುಜರಿ ಬಸವರಾಜ್, ಶರಗಮಸ್ ವಲಿ, ಅರುಣಾ ಜ್ಯೋತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಅಲ್ಲಂ ಪ್ರಶಾಂತ್ ಅವರು ತಿಳಿಸಿದರು.

# ತೀವ್ರ ಜಿದ್ದಾಜಿದ್ದಿನಿಂದ ಚಿಕ್ಕೋಡಿ ಕ್ಷೇತ್ರ

ಚಿಕ್ಕೋಡಿ: ಕಾಂಗ್ರೆಸ್ ನ ಭದ್ರಕೋಟೆಯ ಚಿಕ್ಕೋಡಿ ಸದಲಗಾ ಕ್ಷೇತ್ರದಲ್ಲಿ ಕಳೆದ 35 ವರ್ಷಗಳಿಂದ ಕಾಂಗ್ರೆಸ್ ನ ಭದ್ರಕೋಟೆಯಾಗಿದೆ. ಈ ಕ್ಷೇತ್ರದಿಂದ ಮಾಜಿ ಸಂಸದ ಬಿಡಿಸಿಸಿ ಬ್ಯಾಂಕನ ಅಧ್ಯಕ್ಷ ರಮೇಶ ಕತ್ತಿ ಬಿಜೆಪಿಯಿಂದ ಕಣ–ಕ್ಕೆ ಇಳದಿದ್ದಾರೆ. ಇದರಿಂದಾಗಿ ಚಿಕ್ಕೋಡಿ ಕ್ಷೇತ್ರದಲ್ಲಿ ಚುನಾವಣೆಯು ತೀವ್ರ ಜಿದ್ದಾಜಿದ್ದಿನಿಂದಾಗಿ ಕೂಡಿದೆ.

ಚಿಕ್ಕೋಡಿ ಕ್ಷೇತ್ರದಿಂದ ಕಳೆದ ಬಾರಿ ಗಣೇಶ ಹುಕ್ಕೇರಿ ಬಿಜೆಪಿ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ವಿರುದ್ಧ ಗೆದ್ದು ಶಾಸಕರಾಗಿ ಆಯ್ಕೆಯಾಗಿದ್ದರು. ಈ ಬಾರಿ ಗಣೇಶ ಅವರಿಗೆ ಬಿಜೆಪಿಯಿಂದ ಮಾಜಿ ಸಂಸದ ರಮೇಶ ಕತ್ತಿ ಪ್ರತಿಸ್ಪರ್ಧಿ.ಚಿಕ್ಕೋಡಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗಣೇಶ ಹುಕ್ಕೇರಿ ಹಾಗೂ ಅವರ ತಂದೆ ಪ್ರಕಾಶ ಹುಕ್ಕೇರಿ ಅಪಾರ ಅಭಿಮಾನ ಬಳಗ ಹೊಂದಿದ್ದಾರೆ. ಬಿಜೆಪಿಗೆ ಕಾರ್ಯಕರ್ತರ ಕೊರತೆಯಿದೆ. ರಮೇಶ ಕತ್ತಿ ಹುಕ್ಕೇರಿ ಕ್ಷೇತ್ರದಲ್ಲಿ ವರ್ಚಸ್ಸು ಹೊಂದಿದ್ದಾರೆ. ಚಿಕ್ಕೋಡಿ ಯಲ್ಲಿ ಬಿಜೆಪಿ ಕಾರ್ಯಕರ್ತರ ಕೊರತೆ ಎದ್ದು ಕಾಣುತ್ತಿದೆ.

ಬಿಜೆಪಿಗೆ ಪ್ಲಸ್ ಬಿಜೆಪಿ ಅಭ್ಯರ್ಥಿ ರಮೇಶ ಕತ್ತಿ ತನ್ನದೇ ಅಭಿಮಾನ ಬಳಗ ಹೊಂದಿರುವದು. ಜೊಲ್ಲೆ ಕುಟುಂಬ ಹಾಗೂ ಕವಟಗಿಮಠ ಕ್ಷೇತ್ರದಲ್ಲಿ ರಾಜ–ಕಾರಣದಲ್ಲಿ ಸಕ್ರೀಯವಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆ ಜನರಿಗೆ ಮನವರಿಕೆ. ಲಿಂಗಾಯತ



ಮತಗಳೇ ನಿರ್ಣಾಯಕವಾಗಿದ್ದರಿಂದ ಸಹಜವಾಗಿಯೆ ಬಿಜೆಪಿಗೆ ಅನುಕೂಲ. ಬಿಜೆಪಿಗೆ ಮೈನಸ್ ಕೇಂದ್ರ ಸರ್ಕಾರದ ಬೆಲೆ ಏರಿಕೆಯಿಂದಾಗಿ ಬೇಸತ್ತ ಜನತೆ. ಸದಲಗಾ ಭಾಗದಲ್ಲಿ ಪ್ರಕಾಶ ಹುಕ್ಕೇರಿ ಪ್ರಭಾವ ಬಹಳವಿದೆ.

ಹೀಗಾಗಿ ಬಿಜೆಪಿಗೆ ಬರುವ ಮತಗಳು ಇಬ್ಭಾಗವಾಗುವ ಸಾದ್ಯತೆ.ಕಾಂಗ್ರೆಸ್ ಪ್ಲಸ್ ವಿಧನಸಭಾ ಹಾಗೂ ಪರಿಷತ್ ತಂದೆ ಮಕ್ಕಳ ಆಯ್ಕೆ. ಪ್ರಕಾಶ ಹುಕ್ಕೇರಿ ವರ್ಚಸ್ಸು. ಗಣೇಶ ಹುಕ್ಕೇರಿ ವರ್ಚಸ್ಸು. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಸಹಾಯಕ. ಕಾರ್ಯಕರ್ತರಿಗೆ ಸುಲಭವಾಗಿ ಲಭ್ಯವಾಗುವ ನಾಯಕರು. ಕಾಂಗ್ರೆಸ್ ಮೈನಸ್ ಕುಟುಂಬ ರಾಜ–ಕಾರಣದಿಂದ ಬೇಸತ್ತ ಜನರು ಬೇರೆ ಪಕ್ಷದ ಅಭ್ಯರ್ಥಿಗೆ ಮತ ನೀಡುವ ಸಾಧ್ಯತೆ. ಬಹಳ ವರ್ಷಗಳಿಂದ ಒಂದೇ ಕುಟುಂಬಕ್ಕೆ ಸೀಮಿತವಾಗಿರುವ ಅಧಿಕಾರ.

ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿಯನ್ನು ಹೊರತುಪಡಿಸಿ ಮತ್ತೊಂದು ಉಪವಿಭಾಗ ಮತ್ತು ಮತ್ತೊಂದು ಲೋಕಸಭಾ ಕ್ಷೇತ್ರದ ಹೆಸರೇ ಚಿಕ್ಕೋಡಿ ಇಲ್ಲಿಂದ ಸತತವಾಗಿ ಆರಿಸಿ ಬರುತ್ತಿರುವುದು ಪ್ರಕಾಶ ಹುಕ್ಕೇರಿ ಈ ಹಿಂದಿನ ಲೋಕಸಭೆಗೆ ಪ್ರಕಾಶ ಹುಕ್ಕೇರಿಯವರು ಸ್ಪರ್ದೇ ಮಾಡಿದ್ದ–ರಿಂದ ಅವರಿಂದ ತೆರವಾದ ಕ್ಷೇತ್ರದಕ್ಕೆ ಅವರ ಮಗ ಗಣೇಶ ಹುಕ್ಕೇರಿಯವರನ್ನು ನಿಲ್ಲಸಿದ್ದರು ಗಣೇಶ ಹುಕ್ಕೇರಿಯವರೂ ಸಹ ಸತತ ಎರಡು ಬಾರಿ ಈ ಮತಕ್ಷೇತ್ರ ದಿಂದ ತಂದೆಯಂತೆ ಆರಿಸಿ ಬಂದಿದ್ದಾರೆ. ಚಿಕ್ಕೋಡಿಯಲ್ಲಿಯೇ ಪ್ರಭಾವಿ ಬಿಜೆಪಿ ನಾಯಕರಿದ್ದರೂ ಸಹ ಈವರೆಗೂ ಚಿಕ್ಕೋಡಿ ವಿಧಾನಸಭೆ ಮತಕ್ಷೇತ್ರವನ್ನು ಕಾಂಗ್ರೆಸ್ ನಿಂದ ಬಿಜೆಪಿ ತೆಕ್ಕೆಗೆ ತೆಗೆದುಕೊಳ್ಳಲು ಆಗಿಲ್ಲ..

ಕೃಷ್ಣಾ ನದಿಯ ಪ್ರವಾಹಕ್ಕೆ ಸಿಲುಕಿ ಹೆಚ್ಚು ಬಾಧಿತವಾಗುವ ಗ್ರಾಮಗಳಿರುವ ಮತಕ್ಷೇತ್ರ ಮತ್ತು ತಾಕೂಕು ಎಂದರೇ ತಪ್ಪಾಗಲಾರದು. ಪ್ರತಿಬಾರಿಯೂ ಕೃಷ್ಣೆಗೆ ಪ್ರವಾಹ ಅಪ್ಪಳಿಸಿದಾಗ ಸಾವಿರಾರು ಜನ ಅಕ್ಷರಶಃ ಬೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಗುತ್ತೆ.

ಹೀಗಿದ್ದರೂ ಸಹ ಇಲ್ಲಿ ಪ್ರಕಾಶ ಹುಕ್ಕೇರಿ ಕಳೆದ 5 ಬಾರಿ ಆರಿಸಿ ಬಂದು ಸಚಿವರಾಗಿದ್ದರು. ನಂತರ ಅವರ ಮಗ ಗಣೇಶ ಹುಕ್ಕೇರಿ ಎರಡು ಬಾರಿ ಆರಿಸಿ ಬಂದು ಈಗ ಮೂರನೇ ಬಾರಿಗೆ ತಮ್ಮ ಅದೃಷ್ಠ ಪರೀಕ್ಷೆಗಿಳಿದಿದ್ದಾರೆ..

ಕಾಂಗ್ರೆಸ್ ಹಾಗೂ ಬಿಜೆಪಿಗೆ ಇಲ್ಲಿ ಸಮಬಲವಿದ್ದರೂ ಸಹ ಪ್ರಕಾಶ ಹುಕ್ಕೇ–ರಿಯವರು ಕ್ಷೇತ್ರದಾದ್ಯಂತ ಮಾಡಿರುವ ಅಭಿವೃದ್ಧಿ ಕೆಲಸಗಳು ಹಾಗೂ ಜನರಿಗೆ ಸ್ಪಂಧಿಸುವ ರೀತಿಯಿಂದ ಜನ ಹುಕ್ಕೇರಿ ಮನೆತನಕ್ಕೆ ಮಣೆ ಹಾಕ್ತಾರೆ ಎಂಬ ಮಾತಿ–ದೆ. ಮೀಸೆ ಮಾವ ಎಂದೇ ಪ್ರಖ್ಯಾತಿ ಹೊಂದಿರುವ ಪ್ರಕಾಶ ಹುಕ್ಕೇರಿಯವರ ಅಭಿವೃದ್ಧಿ ದೃಷ್ಠಿಕೋಣ ಕಳೆದ ಎರಡು ಚುನಾವಣೆಗಳಲ್ಲಿ ಅವರ ಮಗ ಗಣೇಶ ಹುಕ್ಕೇರಿಯವರ ಕೈ ಹಿಡಿದಿವೆ.ಒಂದು ವೇಳೆ ಸಮರ್ಥ ಅಭ್ಯರ್ಥಿಯನ್ನು ಬಿಜೆಪಿ ಕಣಕ್ಕಿಳಿಸಿದರೆ ಕಾಂಗ್ರೆಸ್ ಕೋಟೆ ಬಿಜೆಪಿಗೆ ಕೈ ಸೇರುತ್ತೆ ಎಂಬ ಲೆಕ್ಕಾಚಾರಗಳಿದ್ದರೂ ಸಹ ಈ ವರೆಗೂ ಅದು ಸಾಧ್ಯವಾಗಿಲ್ಲ..

ಈಗಾಗಲೇ ಒಂದು ಬಾರಿ ಅಣ್ಣಾಸಾಹೇಬ್ ಜೊಲ್ಲೆ ಮತ್ತೊಂದು ಬಾರಿ ಮಾಜಿ ವಿಧಾನಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ ಇಬ್ಬರೂ ಸಹ ತಂದೆ ಪ್ರಕಾಶ ಹುಕ್ಕೇರಿ ಹಾಗೂ ಮಗ ಗಣೇಶ ಹುಕ್ಕೇರಿ ವಿರುದ್ಧ ಪರಾಭವಗೊಂಡಿದ್ದಾರೆ. ಹೇಳಿಕೊಳ್ಳುವ ಬ್ಯುಸಿನೆಸ್ ಲಾಭಿ, ಇಲ್ಲದಿದ್ದರೂ ಸಹ ಕ್ಷೇತ್ರದಾದ್ಯಂ ಪ್ರಕಾಶ ಹುಕ್ಕೇರಿಯವರ ಹಿಡಿತ ವರ್ಕೌಟ್ ಆಗ್ತಿದೆ ಎನ್ನುವುದು ಒಂದು ವಿಶ್ಲೇಷಣೆ

ಒಟ್ಟಿನಲ್ಲಿ ಅಭಿವೃದ್ಧಿ ಕೆಲಸಗಳು ಮಾತ್ರ ಹುಕ್ಕೇರಿ ಮನೆತನದ ಕೈ ಹಿಡಿದಿವೆ ಎನ್ನುವುದು ರಾಜಕೀಯ ಪಂಡಿತರ ವಾದ.. ಅಂತಿಮವಾಗಿ ಫಲಿತಾಂಶ ಎನ್ನಾಗುತ್ತದೆ ಕಾದುನೋಡಬೇಕಾಗಿದೆ.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089